ಕಂಡೊದ ಚೆಂಡವು
ಪುರಾಲ್‌ದ

(1936)

ಪ್ರಶ್ನೋತ್ತರೊ

ಎಂಕ್ ತುಳುವ ಬಾಲೆಲೆನಾ – ಸುದ್ದಿ ಪನುವರಾ?
ಓಹೋ! ಎಂಕ್ ತೆರಿನವಯಿನ್ ಮಾತ ಪನ್‌ಪೆ ಕೇನ್ವರಾ?

1
ತುಳುವನಾಡ್ ಚಳವಳಸುರು –
ಮಲ್ತಿನೇರ್‌ಯೆ?
ತುಳುವತನಯೆ ಶ್ರೀನಿವಾಸೆ
ಒಡಿಪುದಾರ್‌ಯೆ.

2
ತುಳುವ ಬಾಸೆ ವ್ಯಾಕೊರಣೊನು
ಬರೆಯಿನೇರ್‌ಯೆ?
ತುಳುವೆರಾರ್ ಶ್ರೀನಿವಾಸ
ಪುದರ್‌ದಾರ್‌ಯೆ.

3
ನಂಕ್‌ತುಳುಟು ಪಂಚವಟಿನ್
ಪಂಡಿನೇರ್‌ಯೆ?
ಸಂಕಯೆ ಬಾಯಾರ್‌ದಾರ್
ಭಾಗವತೆರ್‌ಯೆ.

4
ಕನಡ ಕಿಟ್ಣರಾಜಿ ತುಳುಟು
ಕನತಿನೇರ್‌ಯೆ?
ಕನಡಬಾಸೆದಾರ್ ಬಡಕ
ಬೈಲ್‌ದಾರ್‌ಯೆ.

5
ಪಿನೊಡವಾರೆ ಪುದರವೆಂಚ
ಕೇನೊಡೆಂಕ್‌ಯೆ?
ಪನ್‌ಪೆ ಪರಮೇಸ್ರಾಯೆರಾರ್
ಬುದ್ಧಿವಂತೆಯೆ.

6
ತುಳುಬಲೀಂದ್ರ ಸಂಧಿಬರೆನ
ಬಿರ್ಸೆರೇರ್‌ಯೆ?
ತುಳುವಮುಂಜೆಗುತ್ತು ಶೀನ
ಹೆಗ್ಗಡೇರ್‌ಯೆ.

7
ಅಳಿಯಕಟ್ಟ್ ಗುಟ್ಟುನೊಟ್ಟು
ಬರೆಯಿನೇರ್‌ಯೆ?
ಅಳಿಯೆದಾಂತಿ ಸತ್ಯಮಿತ್ರ
ಪುದರ್‌ದಾರ್‌ಯೆ.

8
ಮಂಡಲತುಳುಕಾನಿಗೆನವು
ಕೊರಿನವೇರ್‌ಯೆ?
ಕೇಂಡ್‌ದುಪ್ಪೊಡಾರೆ ಪುದರ್
ಕಿಲ್ಲೆರತ್ತೊಯೆ.

9
ಪುಂಡು ತಾಳಮದ್ದೊಲಿಡ್‌ಲ
ಬಿರ್‌ಸೆರಾರ್‌ಯೆ,
ಪಂಡಿಪೊಲ್ಝುಪಾತೆರೊದಾ
ಪುಣ್ಯವಂತೆಯೆ.

10
ಅಮಲ್ ದೆಪ್ಪಡೇಂದ್ ಕಬಿತೊ
ಕಟ್ಟಿನೇರ್‌ಯೆ?
ನಮ ಕಣ್ಯೂರುದಾ ಮಾರಪ್ಪ
ಸೆಟ್ರ್ ಆರ್‌ಯೆ.

11
ಮದಿಮಲತ್ತ್ ಮದಿಮಯ ಕತೆ
ಬರೆಯಿನೇರ್‌ಯೆ?
ಪುದರ್ ವಿಠಲ ಹೆಗ್ಗಡೆರಾಮ –
ಟ್ಟಾರ್‌ದಾರ್‌ಯೆ

12
ಎನ್ನ ಬಾಸೆ ತುಳುಟು ಕವನ
ಕಟಿದಿನೇರ್‌ಯೆ?
ಕಿನ್ನಿಬಾಲೆ ಪುದರ್‌ದಾರ್
ದುರ್ಗಾದಾಸೆಯೆ.

(1936)

ಜೋ – ಜೋ

ಜೋಜೋ ಜೋಜೋ ಜೋ ತುಳುಬಾಲೆ,
ಜೋಜೋ ಜೋ ಜೀವಸಿರಿ ತುಳುಬಾಲೆ,
ತೊಟ್ಟಿಲ್ ಕಟ್ಟ್‌ದ್ ತೂಂಕುವೆ ಜೋ ಜೋ
ಕಷ್ಟೊ ಅನಿಷ್ಟೊನ್ ಮರಪಾವೆ ಜೋಜೋ

2
ಜೋ ಎನ್ನ ಭಾಗ್ಯೊದ ಬಂಗಾರ್ ಮಾಲೆ,
ಈ ಎನ್ನ ಜೀವೊದ ಬಂಜಾರೊ ಬಾಲೆ,
ಓ ಎನ್ನ ಮೋಹನ್ನ ಸಿಂಗಾರೊ ಸಾಲೆ,
ಈ ಎನ್ನ ಮಂಗಲ ಪಿಂಗಾರೊ ಪಾಲೆ.

3
ಬುಲಿಪಡ ಪ್ರಾಣೊದ ಪದಕೋನೆ ಒಂತೆ,
ನಲಿತೋನು ತೆಲಿತೋನು ಓಎನ್ನ ಮುತ್ತೆ;
ತೆಲಿತೊಂದು ತೆಲಿತೊಂದು ಕೇನೊಡು ಇತ್ತೆ
ತುಳುನಾಡ್ ಸತ್ಯೊದ ನಿತ್ಯದ ಗೀತೆ

4
ಮಾಮಲ್ಲ ಪುದರ್‌ದ ಈ ತುಳುನಾಡ್,
ಧರ್ಮೊದ ಕರ್ಮೊದ ನಿರ್ಮಲ ಬೀಡ್
ನಿತ್ಯೊದ ನೇಮದ ಸತ್ಯೊದ ನಾಡ್
ಕ್ಷೇಮೊಡೆ ಬಾಲೆಳು ಬುಲೆಪುನ ಬೂಡ್

5
ಪಟ್ಟೊದ ಸಿರಿಮಣೆ ಏರ್ದ್‌ರತನೊಡು,
ಇಟ್ಟೆಲ್ ಕುಂಬ್ಳೆಬಾರ್ಕೂರರಮನೆಡ್
ಗಟ್ಟಿಗೆರಾ ರಾಜಮರ್ಯಾದಿ ಪತ್‌ದ್
ಪುಟ್ಟೆರ್ ತುಳುವಪ್ಪೆ ಬಂಜಿಡ್ ಜತ್‌ದ್

6

ಶ್ರೀ ಭಾರತಾಂಬೆನ ಮೋಕೆದ ಮಾಲೆ
ಈ ಭೂಮಿ ಜತ್ತ್‌ದ್ ಬತ್ತನ ಬಾಲೆ?
ಸೋಬೆದ ಸಂಗ್ರಹೊದಾ ಸಿರಿ ಸೇಲೆ,
ಈ ಬೋಡು ಬೋಡೆನ್ನ ಸೌಭಾಗ್ಯದೋಲೆ.

ಜೋಜೋ ಜೋಜೋ ಜೋ ತುಳುಬಾಲೆ
ಜೋಜೋ ಜೋ ಜೀವಸಿರಿ ಪುರುಬಾಲೆ

(1938)

ಕುಡರಿದ ರಾಮ

ಬಲ ಬಲ ಬಲ ಬಲ ಓ ರಾಮ,
ಬಲ ಈ ಕುಡರಿಡೆ ಕುಡರಾಮ.

1
ಕಡಲ್‌ಡ್ ದೆಂಗಿನವೀ ತುಳುನಾಡ್,
ಮೃಡಸಖ ಈ ಕೊರಿ ಭಾಗ್ಯೊದ ಬೂಡು,
ಪಡೆವೊಡು ನಾಡ್‌ನ್ ನಿನ ದಯೆ ಬೋಡು,
ಜಡಜಾಂಬಕ ನಿನ ನಿಜಕಲೆ ಕೊರೊಡು

2
ಅನ್ನೇಯೊ ಮಲ್ತಿನ ಜನತೆದ ಮೂಲೊ
ನಿನ್ನಾ ಕುಡರಿಡೆ ಬಿದೆ ನಿರ್ಮೂಲೊ,
ಮಣ್ಣ್‌ಗ್ ನಿನನೇ ನನ ಒರೊ ಜಾಲ
ಪುಣ್ಯದ ಮಂಗಲ ಮೈಮೆದ ಕಾಲ

3
ಬಿರ್ಕ್‌ದ ಕೈಕಡ್ತ್‌ದಾಕಾರ್ತಿವೀರ್ಯ
ಸೊರ್ಕುನೆ ಕಲೆದೊಂಜಿ ನಿಲೆ ಕೊರಿನಾರ್ಯ,
ಮುರ್ಕುದಿ ಮಾಮಾರಿಲೆನ್ ಗಿಡೆಗಿಡೆಪು
ಸಿರ್ಕ್‌ದಿ ತುಳುಬಾಲೆಲೆಗ್ ಕಲೆಕೋಪು.

4
ಕ್ರಾಂತಿದ ಸತ್ವೊದ ಕುಡರಿದ ರಾಮ
ಭ್ರಾಂತೆರೆ ಧೂರ್ತೆರೆ ನಾಶಕಭೀಮ
ಕಾಂತಿದ ನಿನಕಲೆ ಕೊರ್‌ಗುಣಧಾಮ
ಶಾಂತಿ ಸುಶಕ್ತಿದ ಸತ್ವ ನಿಸ್ಸೀಮ

5
ಕೋಪೊದ ಜಮದಗ್ನಿನಾಜ್ವಲದಗ್ನಿ –
ರೂಪೊದ ಕ್ಷತ್ರಿಯವನದಾವಾಗ್ನಿ
ಕಾಪೊಡು ಏಪೊಲ ರೇಣುಕೆಮಾಣಿ
ಶ್ರೀಪದೊ ನಂಬುದೊ ತುಳು ಜನಮಾನಿ

(1939)

ಪನ್ಲೆ ಒಂಜಿ ಸೊರೊಟು

ಕೆಸರೆ ಗಂಗೆದ ತೀರ್ತೊ, ಬೆಗರೇ
ಪಂಚಗವ್ಯದ ಪುಣ್ಯನೀರ್,
ಕಾಡ್‌ಮುಳ್ಳೇ ಪಾವಡೆದ ನಡೆ
ದೊಂಬು ಬರ್ಸೊನೆ ಅಪ್ಪೆಪೇರ್.

2
ಕಲ್ಲ್‌ದರ್ತ್‌ದ್ ಮಣ್ಣ್‌ಗರ್ತ್‌ದ್
ಏರ್‌ತಿಗಲೆದ ಗಟ್ಟಿಡ್,
ಬಾರ್‌ಬಂಗಾರ್ ಕುರಲ್ ಬೆಂದೆರೊ
ನೆತ್ತೆರುರ್ಕುನ ರಟ್ಟೆಡ್.

3
ತಾರೆತಾರಿದ ಅಮೃತಧಾರೆಡ್
ಬಂಜ ಬಾಜೆಲ್ ತೀರ್‌ಂಡ್,
ಗಂಧಸಾಲೆದ ನುಪ್ಪು ಉಂಡ್‌ದ್
ಸಕ್ತಿ ಜೀವೊಗು ಸೇರ್‌ಂಡ್

4
ತೆರೆತರೆನ್ ತೊರಿತೊಂದು ಒಚ್ಚಿದ್
ಓಡೊ ನೀರ್‌ಡೆ ನೀಂದ್ಯೆರ್,
ಕಡಲಕಂಡೊದ ಬೆನ್ನಿ ಮೆಚ್ಚಿದ್
ಬಲೆಬುಲೆನ್ ಸಮೊ ಬೆಂದೆರ್

5
ಬಕುತಿ ಬೊಳ್ನೆಯ್ ತುಲಿತ್‌ದುರ್ಕುಂಡು
ಮಂತುಕಿಟ್ಣನ ಒಡಿಪುಡು;
ಸಾರೊಕಮ್ಮೊದ ಬಸದಿ, ಗೊಮ್ಮಟ
ರೂಪು ಶಿಲ್ಪೊದ ಪೊರ್ಲುಡು.

6
ಕಡಲಕಳುವೆರ್ ಪೊರ್ಚುಗೀಸೆರ್
ಕುಡಲದೂರುಗು ಜತ್ತೆರ್

ಮಾರಿಯಮ್ಮಗ್ ರಾಣಿಯಬ್ಬಗೆ
ಕೊರಿಯೆರಕುಲೆನ ನೆತ್ತರ್

7
ಕೋಟಿಚೆನ್ನಯೆರಮರ್‌ವೀರೆರ್
ಪೂಜೆ ಪಡೆಯೆರ್ ತಾನೊಡು,
ಪಾತೆರೊಗು ತಪ್ಪಂದೆ ನಡತೆರ್
ದೇವಪೊಂಜೆರ್ ಪುದರ್‌ಡ್.

8
ಕಡಲ್ ದಾಂಟ್ಯೆರ್ ಬಾನ ನೀಂದ್ಯೆರ್
ಸಾಮಿಬಕುತಿದ ಸಕುತಿಡ್,
ಮಣ್ಣ್ ಮುಕ್ಕಂಡ್ ಲಂಕೆ, ಪೊಂಜೊವೆ
ದುಕ್ಕೊದುರಿ ತೂಲಕ್ಕಂಡ್

9
ನೂದುಜನ ಕೌರವೆರ್ ಸಂದ್ಯೆರ್
ಐವೆರೊರಿಯೆರ್ ಪಾಂಡವೆರ್,
ಆಟಕೂಟೊಡೆ ನೀತಿ ಕಲ್ತೆರ್
ಸತ್ಯೊಧರ್ಮೊನೆ ಕಾತೆರ್.

10
ಓಲು ನಿತ್ಯೊಲ ದಾನಧರ್ಮೊಡು
ನೇಮನಡವಳಿ ನಡತ್ಂಡೊ,
ಅಪ್ಪುದೂಪೆದ ಮಣ್ಣ ರಾಸಿಡ್
ಏರೊ ಬುಲಿಪ್ಪೆರ್ ಕೇನುಂಡೊ?

11
ಓಲು ಅಜಿಲೆರ್ ಚೌಟ ಬಂಗೆರ್
ಪಟ್ಟೊ ಸಿರಿಮಣೆ ಏರ್ಯೆರೊ
ಅಪ್ಪು ರಾತ್ರೆಗ್ ತೂಟೆ ತೋಜುಂಡು
ಗಗ್ಗರೊನೆ ಜಣಜಣಿಪುಂಡು.

12
ಇಲ್ಲ್ ಎನ್ನವು, ಮಣ್ಣ್ ಎನ್ನವು
ನಾಡ್‌ನಡೆನುಡಿ ಎನ್ನವು

ಮಾತೆರ್‌ಲ ಪಾತೆರುವೆರಿಂಚನೆ
ಎಂಕೊ – ಭಾಗ್ಯದ ವಂಚನೆ

13
ಅಂಚಿ ತೆಲುಗೆರ್ ಇಂಚಿ ಕನಡೆರ್
ಎಂಚ ತಮಿಳೆರ್ ಮೆರೆಪೆರ್,
ಕಣ್ಣೆದುರೆ ಕೇರಳಲ ಕೆಲೆಪುಂಡು
ಎನ್ನ ತುಳುನಾಡ್ ಬುಲಿಪುಂಡು!

14
ಪರಿಪುಕಟ್ಟುಜಿ ರಡ್ಡ್ ಕಣ್ಣ್‌ಡ್
ಈ ಪಯಸ್ವಿನಿ ಸೀತೆಡ್,
ಸಹ್ಯಗಿರಿ ಸಿರಿಮುಡಿಯೆ ಸಡಿಲ್‌ಂಡ್
ಕಡಲ್ ನುರೆನುರೆ ಕಾರ್‌ಂಡ್!

15
ಏರೆನ್‌ಲ ಎಂಚಿನೆಕ್ ದೂರೊಡು?
ಮೆಗಿಪಲಯೆ ನಮೊ ಸೇರೊಡು;
ಪಲ್ದಿತಂಗಡಿ ಜತೆಟ್ ತೋಜೊಡು
ಅಪ್ಪೆಕಣನೀರ್ ಮಾಜೊಡು

16
ತುಳುವಬಾಸೆದ ತಿರ್ಲ್ ತೆರಿಯೊಡೊ?
ಪಾಡ್ದನೊದ ದನಿ ಏರಡ್!
ನಟ್ಟಿ ನೇಜಿಡ್ ಪನ್ಲೆ ಓಬೆಲೆ
ಉಂತ್‌ದಾ ಸೊರೊ ಕೇನಡ್

17
ಏರಡೀ ಕೊಡಿ ಎತ್ತರೆತ್ತರೊ
ಮುಟ್ಟಡೀ ದನಿ ಬಾನೊಗೆ;
ಪನ್ಲೆ ಒಂಜೇ ಸೊರೊಟು ತುಳುನಾಡ್
ಎದ್‌ರ್‌ಬರ್ಪೆರೊ – ಏರ್‌ಗೆ?

(1983)

ಸಾರೊ ಎಸಳ್‌ದ ತಾಮರೆ

ಏತ್ ಪೊರ್ಲುದ ಬಾಸೆ ನಮ ತುಳು
ಸಾರೊ ಎಸಳ್‌ದ ತಾಮರೆ;
ಪಂಡಿಬಾಯಿಡ್ ಕೇಂಡಿ ಕೆಬಿಟ್
ಉರ್ಕುಂಡಮೃತೊದ ನುರೆ ನುರೆ.

2
ಅಪ್ಪೆಪೇರ್‌ದ ಒಪ್ಪ ಜತ್ತ್‌ಂಡ್
ಮೈಟ್ ಮನಸ್‌ಡ್ ದಿಂಜಿಂಡ್,
ನಿದ್ರೆ ಕನಟ್‌ಲ ಅಪ್ಪೆಪಾತೆರೊ
ಜೀವೊಡೇ ಸೊರೊ ಸೇರ್‌ಂಡ್.

3
ಎತ್ತರೆತ್ತರೊ ಗುಡ್ಡೆಬೆರಿಟ್,
ನೀಲೊ ನೀರ್‌ದ ಕಡಲ ಬರಿಟ್,
ಕಳಮೆ ಕಮ್ಮೆನೊದಿಂಜಿ ಕಂಡೊ,
ಪೊರ್ಲುಡಿಂಚಿನ ಭೂಮಿ ಉಂಡೊ?

4
ಮಿತ್ತ ಸೊರ್ಗೊದ ಪೆತ್ತ ಕಂಜಿ
ತುಳುವನಾಡ್‌ಗ್ ಬತ್ತ್‌ಡೊಂಜಿ
ಸತ್ಯಪುತ್ರೆರೆ ಬದ್‌ಕ್‌ಗಾದ್
ನಿತ್ಯ ಉಂತುಂಡು ಜಾಗೆತೂದ್

5
ದಯಿತ ಸಾಲ್‌ಡ್ ಮರತ ಮೇಲ್‌ಡ್
ಗಿಳಿಯೊ ಕಲಕಲ ಕೋಗಿಲೆ;
ವೀಣೆರಾಗೊದ ತಂತಿ ಕೇನೊಡೊ
ಪಾತೆರೊಡು ತುಳು ಜೋಕುಲೆ

6
ಅಗೆಲ ತಿಗಲೆದ ಗಲ್ಲ ಮೊಸೆದ
ರಟ್ಟೆಗಟ್ಟಿದ ಜವ್ವನೆ,

ರಾಪೆ ಪಲಯಿಡ್ ತೂಪೆರಂಚಿಗೆ
ಓರೆಕಣ್ಣ್‌ಡ್ ಆಯನೆ;

7
ಅಕುಲೆ ತುಳುವೆರೆ ಪೊರ್ಲು ಪೊಂಜೊವು –
ಮುಗುರುಮಲ್ಲಿಗೆ ತೆಲಿಕೆಡ್,
ಸಾಲ್ ಸಾಲ್‌ಡ್ ಸೇಲೆ ಸೇಲೆಡ್
ನೇಜಿನಡ್‌ಪೆರ್ ನಲಿಕೆಡ್.

8
ಮೆಲ್ಲ ಮೆಲ್ಲಗ್ ಗಾಳಿ ಬೀಜುಂಡು
ಪೂತ ಪರಿಮಳೊ ಸುತ್ತಲ,
ತಾರೆಬಾರೆಲ ತರೆನ್ ತೂಂಕುಂಡು
ಓಬೆಲೆದ ದನಿ ಕೇನ್‌ಲ.

9
ಕಂಡೊದತ್ತ್‌ದ್ ಬೆನ್ನಿ ಬೆಂದ್‌ದ್
ಬಾಲೆಲಿಲ್ಲಗ್ ಬನ್ನಗ,
ತುಳುತ ಅಪ್ಪೆನ ತೆಳಿತ ಗಂಜಿಡ್
ಎಂಚಿ ಸಂತೊಸು–ಉನ್ನಗ

10
ಗುಡ್ಡೆ ಏರ್‍ಯೆರ್ ಕಡಲ್ ದಾಂಟ್ಯೆರ್
ದೂರೊದೂರುಗು ಪೋಯೆರ್;
ಓಲು ಉಪ್ಪಡ್ ಬಾಸೆ ಒಂಜೇ
ಅಕ್ಕೆ ಅಣ್ಣಾ ಲೆತ್ತೆರ್.

11
ಬುಡುಗಡೆದ ಸಿರಿ ಬೊಳ್ಪು ತೋಜಿಂಡ್
ಗಾಂಧಿತಪಸ್‌ದ ಪುಣ್ಯೊಡು;
ದೇಸೊದೆಡ್ಡೆಗ್ ಬಾಸೆದೆಡ್ಡೆಗ್
ಬೆನೊಡು ನಮೊ ಸಮೊ ಮಣ್ಣಗ್.

(1983)

ಬತ್ತನೋ ಈ ಬರ್ಪನೊ?

ಏತ್‌ಕಾಲೊಡ್‌ದಿಂಚಿ ಕಾಪುವೆ
ಬತ್ತನೋ ಈ ಬರ್ಪನೋ?

ಜಾಲ್‌ಜತ್ತ್‌ದ್ ಪಗೆಲ್ ತೂಪೆ,
ರಾತ್ರೆ ಬಾಕಿಲ್‌ದೆತ್ತ್ ದೀಪೆ,
ಕತ್ತಲೆಡ್‌ಲಾ ಕಣ್ಣ್ ಬುಡುಪೆ
ಬತ್ತನೋ ಈ ಬರ್ಪನೋ?

ಕಣ್ಣ್ ಕೂರುಜಿ ಇರ್ಲ್ ಪಗೆಲ್
ರೂಪೊಪೊರ್ಲುನು ತೂವೊಡೇ;
ಕೆಬಿನ್ ಕೊರ್‌ದೇ ಉಪ್ಪೆ, ಪಜ್ಜೆದ
ದನಿಲ ಕೇನುಜಿ – ಕಾಪೊಡೇ.

ಕನಟ್ ಆಂಡಲ ನೆನಪೆ ನಿನ್ನವು
ಮನಸ್‌ಡುರಿವುರಿಯೇರುಂಡು;
ಬೊಳ್ಪುಗಾದೇ ದೊಂಬುಡುಂತ್ಯೆ
ಪಿದಯುಳಯಿ ಮೈಬೈಪುಂಡು.

ಪೋಂಡು ಪುಣ್ಣಿಮೆ, ಮುಗಿಂಡ್ ಮಾರ್ನಮಿ
ಕರಿಂಡ್ ಪರ್ಬೊಲ ಕಾತ್‌ದ್,
ಕಣ್ಣನೀರ್‌ಡೆ ಮಿೊದ್ ಉಂತ್‌ದೆ
ನಿನ್ನ ಪೊರ್ಲುಗು ಸೋತ್‌ದ್.

ಮೆಂಚಿದೊಂಜೇ ಗೆರೆಲ ಬೂರುಜಿ
ಮುಗಲ್ ಬಾನೊಡು ತೋಜುಜಿ
ಕಾರ್ತೆಲಾಂಡಲ ಬರ್ಸೊ ಬರ್ಪುಜಿ
ತಣ್ಪು ಜೀವೊಗು ಕೊನ್ಪುಜಿ

ಏಪೊ ಬರ್ಪನೋ? ಬತ್ತೊಂದುಲ್ಲನೋ?
ಬರ್ಪಿತಾದಿಲ ದೂರೊನೊ?
ಎನ್ನ ಒಡಲ್‌ದ ಉರಿನ್ ಪಿಂದನೊ?
ಬತ್ತನೋ ಈ ಬರ್ಪನೋ?

ಏತ್ ಕಾಲೊಡ್‌ದಿಂಚಿ ಕಾಪುವೆ
ಬತ್ತನೋ ಈ ಬರ್ಪನೋ?

(1989)

ಲೆಪ್ಪುನ್ಯೇರ್?

ಲೆಪ್ಪುನ್ಯೇರ್?
ಲೆಪ್ಪುನ್ಯೇರ್?
ಕೇನುಂಡೊಂಜಿ ಸೊರೊ!
ಲಕ್ಕ್‌ಲಕ್ಕ
ಲಕ್ಕ್‌ಲಣ್ಣಿ
ಓಕೊನೊಡು ಒರೊ.
ಎಂಚಿ ಮಿಂಚಿ ದನಿ!
ಲೆಪ್ಪುನ್ಯೇರ್ ಪನಿ?

2
ಮೂಡಾಯಿಡ್ ಕೆಂಪುಬಣ್ಣೊ
ಪೊರ್ತುದ ಬಂಗಾರ್ ಕಣ್ಣೊ?
ತಾಮರೆ ಪೂ ಎಸಳೆಸಳ್‌ಡ್
ಗಮುಗಮಿಪುಂಡು ಪರಿಮಳೊಡು;
ಅರಳ್‌ಂಡ್ ನಮ ಮನಸ್,
ಉಂದು ಅಮೃತೊದ ವಣಸ್ !

3
ಈ ಮೂರ್ತೊನು ತಪ್ಪವಡೆ
ನಿದ್ರೆಡ್ ಕಳೆವೊನಡೆ
ಮೈಕುಡ್ತ್‌ದ್ ಲಕ್ಕೊನುಲೆ
ನಿಮುರ್‌ದ್ ಉಂತೊನುಲೆ
ಎಚ್ಚರಿಗೆನೆ ಬದ್‌ಕ್
ನಿದ್ರೆ ಸಾವು ಸರಿಕ್.

4
ಜೆತ್ತ್‌ದಿತ್ತಿ ಕರಿಕಾಲೊಡು
ಇಲ್ಲ್‌ದುಲಯಿ ನುರ್ಕ್ಯೆರ್,
ಕಣ್ಣ್‌ಬುಡುದು ಸರಿತೂವೊಡು
ನಮ ಮಣ್ಣ್‌ಡ್ ಸೊರ್ಕ್ಯೆರ್,
ನನ ಜೆಪ್ಪಡೆ ನಿದ್ರೆಡ್
ಎಚ್ಚರಿಗೆನೆ ಉಪ್ಪಡ್

5
ಜೇರುಲೊಪ್ಪ ಜೇವುಲು
ಆಂಜೊವೊಪ್ಪ ಪೊಂಜೊವು,
ಜವ್ವನೆನೋ ಜವ್ವಂದಿಯೊ?
ಪರಬ ಜತೆಟ್ ಪರಬೆದಿಯೊ
ಸಾಲ್ ಸಾಲ್ ಸೇರ್ಲೆ
ಸೇರ್‌ದ್ ಸೊರೊ ಕೇನ್ಲೆ.

6
ಚೆಂಡೆದ ದನಿ ಮದ್ದಳೆ ತನಿ
ಜಾಗಟೆ ಕಿನಿ ಕಿನಿಲ,
ತಂಬೂರಿದ ತುತ್ತೂರಿದ
ಸರಿಗಮಪದನಿಸಲ,
ಈದನಿ ಸಂಗೀತೊ
ರಾಗೊಗು ರುಚಿ ಏತೊ?

7
ಆರೋಹಣ ಅವರೋಹಣ
ಆಲಾಪೊಲ ಉಂಡು,
ಏರ್‌ದ ಸೊರೊ ಜೋರುದ ಸೊರೊ
ಮನಸೋ ಮರ್ಲಾಂಡ್
ಅಂಚಿಡ್‌ದೋ ಇಂಚಿಡ್‌ದೋ
ಈ ದನಿ ಒಂಚಿಡ್‌ದೊ?

8
ಹಿಮಾಲಯದ ಮಿತ್ತ್‌ಡ್‌ದೋ
ಉಪ್ಪು ಕಡಲ್ ಸುತ್ತುಡ್‌ದೋ
ಪೊಸಡಿಗುಂಪೆದಾಕರೆಡ್‌ದೊ
ಪಯಸ್ವಿನಿದ ಈ ಕರೆಡ್‌ದೊ
ಬೀಸಗಾಳಿ ಬೀಜುಂಡು
ಸಕುನೊ ಎಡ್ಡೆ ತೋಜುಂಡು

9
ಪರಪಿ ತುದೆತ ನೀರ್‌ಡ್‌ದೊ?
ಕಳಮೆ ಬೈಲ್ ಬಾರ್‌ಡ್‌ದೊ?

ತಾರೆಡ್‌ದೊ? ಬಾರೆಡ್‌ದೊ?
ಬಾನೊಡ್‌ದೊ? ಭೂಮಿಡ್‌ದೋ?
ಬತ್ತ್ಂಡತ್ತೆ ಸೊರೊ
ಎಚ್ಚರಾವೊಡೊರೊ.

10
ತೆರೆಕಡಲ್‌ದ ಸೊರೊ ಅತ್ತ್
ಉಂದು ಉಡಲ್‌ದ ದನಿಗೆ,
ಗುಡ್ಡೆದ ಅಡ್ಡೊಡ್‌ದತ್ತ್
ತಿಗಲೆಡ್ ಗದ್ದುಂಡುಗೆ,
ಅಪ್ಪೆನ ಪಾತೆರೊ ಈ ದನಿ
ಬಾಲೆಲೆ! ಭಾಗ್ಯೊನು ಕಾತೊನಿ.

11
ಕಡಲ್‌ದ ನೀರ್ ದಾಂಟೊನೊಡೊ!
ಗುಡ್ಡೆನ್ ತೊರಿತೊನೊಡೊ!
ತೆಡಿಲ್‌ದ ತೂ ತಾಂಟೊನೊಡೊ !
ಪಾತಾಳೊನೆ ಗರಿತೊನೊಡೊ!
ಮಣ್ಣ್‌ದ ರುಣೊ ಸಂದಾವೊ
ಲೆಪ್ಪುಗು ನಮ ಓಕೊನುವೊ.

12
ಅಪ್ಪೆನ ಪೇರ್ ಬಂಜಾರೊಗೆ
ಬಾಯಿಗ್ ಬಂಜಿಗ್‌ಲ,
ಸಂತೋಸೊದ ಸಿರಿಪರ್ಬೊಗೆ
ನಾಡ್‌ಗ್ ಬೂಡುಗುಲ,
ಬರ್ಪೆರಪ್ಪೆ ಬರ್ಪೆರ್
ಎಚ್ಚರಾಂಡ್ ಬರ್ಪೆರ್.

13
ಕಣೆಪಲಯಿದ ಕರೆ ಕಂಬುಲ
ರಟ್ಟೊಡು ನೀರ್ ನೀಸಾನಿ
ಆ ಕೋಲೊದ ಈ ಮೇಳೊದ
ರಟ್ಟೆದ ಬಲ ನರಮಾನಿ

ನಲಿನಲಿತ್‌ಂಡ್ ಲೇಲೇಲೇ
ಸಿರಿಪಾಡ್ದನೊ ಓಬೇಲೇ.

14
ಲೆಪ್ವೆರಾರ್ ಲೆಪ್ವೆರಾರ್
ನಮನ್ ಪೆದ್‌ದಿ ಅಪ್ಪೆ,
ಕೇನ್‌ಂಡತ್ತೊ ಕೇನ್‌ಂಡತ್ತೊ
ಪನ್ಲೆ ಬೇಗಬರ್ಪೆ.
ಈ ಜೀವೊಗು ಬೊಲ್ಪು
ನಮ ಒಡಲ್‌ಗ್ ತಂಪು!

15
ಲೆಪ್ಪುನ್ಯೆರ್
ಲೆಪ್ಪುನ್ಯೆರ್
ಕೇನುಂಡೊಂಜಿ ಸೊರೊ
ಲಕ್ಕಲಕ್ಕ
ಲಕ್ಕಲಣ್ಣ
ಓಕೊನೊಡು ಒರೊ;
ಎಂಚಿ ಮೆಂಚಿ ದನಿ
ಲೆಪ್ಪುನ್ಯೆರ್ ಪನಿ.



ಭಾಗ ೨

ಭೂತಾಳಪಾಂಡ್ಯ

ಸಾವಿರ ವರ್ಷದ ಹಿಂದಕೆ ನಡೆಯಿತು
ಕತೆಯೊಂದನು ಹೇಳುವೆ ಕಂದ;
ಯಾವನ ಕಾಲದಿ, ಯಾತಕೆ ಹುಟ್ಟಿತು,
ಅಳಿಯಕಟ್ಟೆನುತ – ತಿಳಿ ಚಂದ.

ಪಾಂಡ್ಯದೇಶದಲಿ ವರ್ತಕನಿದ್ದನು
ದೇವಪಾಂಡ್ಯ ಬಲು ಸಿರಿವಂತ;
ತಂಡತಂಡದಲಿ ಹಡಗವ ಸಾಗಿಸಿ
ದುಡ್ಡು ಗಳಿಸಿದನು ಗುಣವಂತ

ಮನ್ನಣೆ ಸಂಪದವೆಲ್ಲವು ಹೆಚ್ಚಿತು
ವ್ಯಾಪಾರದಿ ಗೆಲವಾಗುತಿರೆ;
ಸಣ್ಣ ಹಡಗಗಳು ಸಾಲದೆ ಹೋಗಲು
ದೊಡ್ಡದು ಕಟ್ಟಿಸೆ ಮನತೋರೆ –

ಮರಗಳ ತರಿಸಿದ ಶಿಲ್ಪಿಯ ಕರೆಸಿದ
ಕೂಲಿಗಳೆಲ್ಲರ ಕೂಡಿಸಿದ;
ಭರದಲಿ ಹಡಗದ ಕೆಲಸವ ಮುಗಿಸಿದ,
ವೆಚ್ಚವ ಗಣಿಸದೆ ಮಾಡಿಸಿದ.

2

ಕೇಳಿ ಮುಹೂರ್ತವ ಜೋಯಿಸರಲ್ಲಿಯೆ
ದಿನ ತಿಥಿಯೆಲ್ಲವು ಶುಭವಿರಲು,
ತಾಳುತ ಸಂಭ್ರಮ, ಸಂತಸದಲ್ಲಿಯೆ,
ನೀರಿಗೆ ಹಡಗವನಿಳಿಸಿರಲು –
ಆಹಾ! ಅಚ್ಚರಿ! ಏನದು ಶಬ್ದವು?
ಕೇಳಿದರೆಲ್ಲರು ನಡನಡುಗಿ !
"ಓಹೋ! ನಿಲ್ಲಲಿ! ನರಬಲಿ ಸಲ್ಲಲಿ!"
ದನಿಯೊಂದೆದ್ದಿತು! ಗುಡು ಗುಡುಗಿ!

ಸಿಡಿಲೇ ಹೊಡೆದಂತಾಯಿತು ಪಾಂಡ್ಯಗೆ,
"ಬಲಿಯನು ಕೊಡುವುದೆ ಯಾರನ್ನು?

ನುಡಿಯಿತು – ಕುಂಡೋದರವಿದು ಭೂತವು!
ಮಾಡುವುದೇನನು ನಾನಿನ್ನು?"

ಚಿಂತೆಯು ಮುಸುಕಿತು! ದುಗುಡವು ಹೆಚ್ಚಿತು,
ಪಾಂಡ್ಯನು ಬಂದನು ಮನೆಗಾಗ,
ಎಂತಾದರು ಬಲಿ ಕೊಡಬೇಕೆನ್ನುತ
ಕರೆದವನೆಂದನು ಸತಿಗಾಗ :

"ಮಕ್ಕಳು ನಮಗಿಹರೇಳುವರವರಲಿ
ಒಬ್ಬನನಿಂದಿಗೆ ಬಲಿಕೊಡುವ;
ಹೊಕ್ಕಿಹ ಮಾರಿಯ ತೊಲಗಿಸದಿದ್ದರೆ
ಪೀಡೆಯ ದಿನ ದಿನ ಕೊಡುವನವ

"ಉಳಿದಾ ಮಕ್ಕಳಿಗಾದರು ಸುಖವಿದೆ,
ಚಿಂತೆಯ ಮಾಡುವಿಯೇ ಮಡದಿ?
ತಿಳಿಸೈ! ಪುತ್ರರು, ತಂದೆಗು ತಾಯಿಗು
ಸಮಹಕ್ಕಿದಕೇನನು ನೆನೆದಿ?"

"ಅಕಟಾ! ಪಡೆದೀ ಮಕ್ಕಳೊಳೊಬ್ಬನ
ಬಲಿಕೊಡಲೆಂಬೀ ಮನವುಂಟೆ?
ಸಕಲೈಶ್ವರ್ಯವು ಹೋದರು ಹೋಗಲಿ!
ಮಗನನು ಕೊಲ್ಲಲು ಕೊಡಲುಂಟೆ?

"ಇಂದೇ ಹೊರಟೆನು ನಿಮ್ಮಯ ಮನೆಯನು,
ಸಿರಿ ಸೌಭಾಗ್ಯವು ಬೇಕಿಲ್ಲ;
ತಂದೆಗೆ ಮಕ್ಕಳು ಭಾರವೆನಿಸಿದರು
ಹೆತ್ತವಳಾನೊಪ್ಪುವಳಲ್ಲ."

ಹೆಂಡತಿಯೀಪರಿ ಖಂಡಿಸಿ ನುಡಿಯಲು,
ಗಾಯಕೆ ಗೆರೆಯೆಳೆದಂತಾಯ್ತು!
ಪಾಂಡ್ಯನು ದುಃಖದಿ ಹಾಸಿಗೆ ಹಿಡಿದನು
ಸುದ್ದಿಯು ಮನೆ ಮನೆ ಹರಡಿತ್ತು

3

ದೇವಪಾಂಡ್ಯ ಸೋದರಿಗೀವಾರ್ತೆಯು
ಮುಟ್ಟಿತು, ತನ್ನಣ್ಣನ ಚಿಂತೆ

ನಯವತಿ – ಸತ್ಯವತಿಯು, ಪತಿ ಸುತರೊಡ–
ಗೂಡುತ ಬಂದಳು, ಗುಣವಂತೆ

ಸೇವಕರೆಂದರು, ಮನೆಯವರೆಂದರು,
ಸೋದರ ಕೊರಗುವ ಕಾರಣವ
ಯಾವುದೆ ತೆರದಲಿ, ಸಲಿಸದೆ ನರಬಲಿ
ಹಾಸಿಗೆ ಹಿಡಿದಿಹನೆಂದರು

ತನ್ನೊಡಹುಟ್ಟಿದ ಸೋದರ ಹೃದಯವು
ಮರುಗುತಲಿರುವುದ ನೋಡಿದಳು;
ತನ್ನೊಡಲಿನ ಮಿದು ಕರುಳೇ ಕರಗಿತು!
ಅಣ್ಣಗೆ ಬಿನ್ನಹ ಮಾಡಿದಳು –

"ಏಳೆನ್ನಗ್ರಜ! ನೀನಿದಕೀಪರಿ
ಮರುಗಲು ಬೇಕೇ? ಬಿಡು ಚಿಂತೆ,
ಕೇಳೆನ್ನಯ ಮಗನನು ನಾನೀವೆನು,
ಭೂತಕೆ ನರಬಲಿ ಸಲುವಂತೆ."

ಸವಿಜೇನಿನ ಮಳೆ ಸುರಿದಂತಾಯಿತು
ತಂಗಿಯ ನುಡಿಗಳಿವನು ಕೇಳಿ!
ಬುವಿಯಲಿ ನಮ್ಮೊಡಹುಟ್ಟುಗಳಲ್ಲವೆ
ಕಷ್ಟಕೊದಗುವರು ನಿತ್ಯದಲಿ?

"ನನ್ನೀ ಕಾರ್ಯಕೆ ನನ್ನಯ ಸುತರನೆ
ಕೈಹಿಡಿದಾಕೆಯು ಕೊಡಲಿಲ್ಲ!
ನಿನ್ನೊಬ್ಬನೆ ಮಗನಿವನನು ನೀಡುವೆ !
ಭಾವ ಕೋಪಿಸನೆ? ಇದು ಸಲ್ಲ!"

"ನಮ್ಮೊಳು ಭೇದಗಳಿತ್ತೇ ಸುಖದಲಿ?
ದುಃಖದಿ ತೊಲಗುವೆವೇ ಹೇಳು?
ಸಮ್ಮತಿ ಪಡೆದೇ ಬಂದಿಹೆ ಸೋದರ,
ಉಮ್ಮಳವನು ಬಿಡು ಬೇಗೇಳು"

4

ಸತ್ಯವತಿಯು ತನ್ನಯ ಸುತ ಜಯನನು
ಮೀಯಿಸಿ ತಂದಳು ಶುಚಿಯಾಗಿ;

"ಸತ್ಯಾತ್ಮನು ಕಾಪಾಡಲಿ ಕಂದನ!"
ಎನ್ನುತ ಕೊಟ್ಟಳು ಬಲಿಗಾಗಿ!

ಬಂದಿತು ನಾಡಿನ ಸಂದಣಿ ಜನರದು,
ನರಬಲಿಯಲ್ಲವೆ? ನೋಡಲಿಕೆ!
ತಂದು ಕಠಾರಿಯನೊಂದನು ಪಾಂಡ್ಯನು
ಎತ್ತಿದನಳಿಯನ ಕುತ್ತಿಗೆಗೆ!

"ನಿಲ್ಲೈ! ನಿಲ್ಲೈ!! ಕೊಲದಿರು ಪಾಂಡ್ಯನೆ,
ಬಲಿಯಿದು ಬಂದಂತೆನಗಾಯ್ತು!
ಎಲ್ಲಾ ನಿನ್ನಯ ಸಂಪದವಳಿಯಗೆ
ಸಲ್ಲಿಸೆ" ನುತ ನುಡಿ ಬಯಲಾಯ್ತು!

ಕುಂಡೋದರನೆಂದೀ ನುಡಿ ಕೇಳುತ,
ನಲಿದರು ಹರ್ಷದಿ ಜನರಂದು!
ಪಾಂಡ್ಯನು ಬರೆದನು ಪ್ರೀತಿಗೆ ಮೆಚ್ಚುತ
ಸೋದರಿ ಸುತನಿಗೆ ಸೊತ್ತೆಂದು.

ಅಳಿಯನು ಮಾವನ ಮರಣದಿ ಪಡೆದನು
ಮನೆ ಹಣ ಬದುಕುಗಳೆಲ್ಲವನು;
ಗಳಿಸಿದ ವ್ಯಾಪಾರವ ನಡೆಸುತಲವ
ಧನ ಜನ ಗುಣವನು – ಕೀರ್ತಿಯನು!

ಕುಂಡೋದರ ಭೂತಕೆ ಬಲಿ ಕೊಡುವರೆ
ಕೊಂಡೊಯ್ದುದ್ದರಿಂ ಭೂತಾಳ –
ಪಾಂಡ್ಯನೆನುವ ಹೆಸರೆತ್ತಿಯೆ ಕರೆದರು,
ಮಂಡಲ ಭೂಮಿಯ ಜನರೆಲ್ಲ!

5

ಕಡಲಿನ ತೆರೆಗಳ ತುಳಿಯುತ ನರ್ತಿಪ –
ಳಲ್ಲವೆ ತುಳುನಾಡಿನ ರಾಣಿ?
ಹಡಗದಿ ಬಾರ್ಕೂರಲಿ ಬಂದಿಳಿದನು
ಪಾಂಡ್ಯನು ನಿಜಕೂ ಭಾಗ್ಯಮಣಿ!

ಮರಣವ ಹೊಂದಿರೆ, ಬಾರ್ಕೂರಿನ ದೊರೆ,
ಪಟ್ಟವನೇರಲು ಸುತರಿರದೆ;

ಅರಮನೆಯಾನೆಯ ಕೈಯ್ಯಲಿ, ಮಾಲೆಯ –
ನಿತ್ತರು ಸತ್ಯದ ನೆಲೆ ತಿಳಿದೇ!

ಮಾಲೆಯನೆತ್ತುತ ಮದಗಜ ಹೊರಟಿತು,
ಕೇರಿಕೇರಿಗಳನಲೆದಾಡಿ;
ಲೀಲೆಯೊಳಿಕ್ಕಿತು ಪಾಂಡ್ಯನ ಕೊರಳಿಗೆ
ಮಾಲೆಯನಾತನ ಗುಣ ನೋಡಿ!

ಜಯಪಾಂಡ್ಯನು ಸಿರಿಪಟ್ಟದಿ ಕುಳಿತನು
ತುಳುನಾಡಿನ ದೊರೆಯೆನಿಸಿದನು;
ಯಾವೆಡೆಯಲ್ಲಿಯು ಸುಖವೆಲ್ಲೆಲ್ಲಿಯು
ದಾನ ಧರ್ಮಗಳ ನಡೆಸಿದನು

ಅಳಿಯನು ಮಾವನ ಸೊತ್ತನು ಪಡೆದಾ
ಕತೆಯನು ಪ್ರಜೆಗಳು ಕೇಳಿದರು;
ತಿಳಿದರು ಸತ್ಯವ, ಪ್ರೀತಿಯ ತತ್ತ್ವವ
ಅಳಿಯಕಟ್ಟಿನೊಳೆ ಬಾಳಿದರು.

ನೇತ್ರಾವತಿ

ಪಡುವಣ ಬುಡದಲಿ ಹುಟ್ಟಿ,
ಕುದುರೆಮುಖದ ಬಂಡೆ ತಲೆ ಮೆಟ್ಟಿ,
ಹಾರುತ, ಬೀಳುತ, ಕುಣಿಯುತ, ಮಣಿಯುತ
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 1 ॥

ಎಡ ಬಲ ದಂಡೆಯ ಕೊರೆಯುತ ತಾಗಿ,
ಕಲ್ಲನು ಮಣ್ಣನು ಕೊಚ್ಚುತ ಸಾಗಿ,
ಎಲ್ಲಿಯು ನಿಲ್ಲದೆ, ಯಾರನು ಕೇಳದೆ,
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 2 ॥

ಹೊಂಬಣ್ಣದ ಹೊಸ ಕಿರಣವ ಬೀರಿ,
ಬಂದಿರೆ ರವಿ ಮೂಡಣ ಗಿರಿಯೇರಿ,
ಸೂರ್ಯನ ಮುಂಗಡೆ ಕನ್ನಡಿ ಹಿಡಿದು
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 3 ॥

ಸುತ್ತಲು ತುಂಬಿದ ಹೊಲಗಳಿಗೆಲ್ಲ
ನೀರೆರೆಯುತ, ಫಲ ಬರಿಸುವಳಲ್ಲ.
ಬೆಳೆಗಳ ಬೆಳೆಸಿ, ತೋಟವನುಳಿಸಿ,
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 4 ॥

ಜಳ್ಳವನಿಳಿಸುತ ಹಾಕಲು ಹುಟ್ಟು
ದೋಣಿಯ ದೂಡಿರೆ ಹಾಯಿಯ ಬಿಟ್ಟು
ಜನರನು ದಾಟಿಸಿ ದಡದಿಂ ದಡಕ್ಕೆ.
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 5 ॥

ತೆರೆಗಳ ನೊರೆಗಳ ಮಾಲೆಯನ್ನೆತ್ತಿ
ಒಲಿಯುತ ನಲಿಯುತ ಬಂದಳು ಸುತ್ತಿ,
ಕಲಕಲ ನಾದದಿ ಹಾಡಿ ವಿನೋದದಿ
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 6 ॥

ನವರತ್ನ ನಿಧಿಯಲ್ಲವೆ ಕಡಲು?
ಪಡೆಯುವಳೇನನೋ ರಭಸದಿ ಸಾಗಲು,
ಸಾಗರಸಂಗಮಕೆನಿತಿದೆ ಸಂಭ್ರಮ?
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 7 ॥

ಒಳಗಡೆಯೇನೋ? ಮೊಸಳೆಯೊ? ಮೀನೊ?
ತಳದಲಿ ಸೆಳೆಯುತ ಸುಳಿಯಿಹುದೇನೊ?
ನಿರ್ಮಲ ನೀರೇ ಮೇಲ್ಗಡೆ ತೋರೆ!
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 8 ॥

ಮಳೆಗಾಲದ ನೆರೆಯುಬ್ಬರವೆಲ್ಲ,
ಬಿಸಿಲಿನ ಬೇಗೆಗೆ ಬತ್ತುವುದಲ್ಲ!
ಹಿಗ್ಗಿದವರು ತಗ್ಗಲೆಬೇಕೆಂದೊ?
ಹರಿವಳು ನದಿ ನೇತ್ರಾವತಿಯು;
ಸಮುದ್ರರಾಜನ ಪ್ರಿಯಸತಿಯು ॥ 9

ಪೊಸಡಿ ಗುಂಪೆ

ಎಸೆವ ಶುಭ್ರ ಶಿಖರವೆತ್ತಿ
ಮಸಗಿ ನಿಂತ ಧೀರ ಮೂರ್ತಿ,
ಪೊಸಡಿ ಗುಂಪೆ ಬೆಟ್ಟ ನೋಡು,
ಹೊಸತು ಕಣ್ಗೆ ಹಬ್ಬ ಮಾಡು.
ಸ್ಫೂರ್ತಿ ಧಾರೆಯೆರೆದಿದೆ;
ಶಕ್ತಿ ನೀಡಿ ನಿಂತಿದೆ ॥ 1 ॥

ಕಾಡಕೇಡು ನಿನ್ನೊಳುಂಟೆ?
ನೋಡೆ ದೃಷ್ಟಿ ಮರಳಲುಂಟೆ?
ಬೇಡವೆಮಗೆ ಹಾವು ಹುಲಿಯ
ಬೀಡು, ನೀನೆ ಬೆಟ್ಟದೊಡೆಯ,
ಅಸಮ ಕೀರ್ತಿತೇಜನೆ,
ಹೊಸ ನಗಾಧಿರಾಜನೆ ॥ 2 ॥

ದೂರವಿರುವ ಬೆಟ್ಟವೆಲ್ಲ
ತೋರುತಿಹವು ನುಣ್ಣಗೆಂದು,
ಮೇರು ಹಿಮಾಲಯಗಳನ್ನು
ಏರಹೋಗಿ ಮಡಿದರಿಂದು,
ಅದರೊಳಲ್ಲಿ ಕ್ರಾಂತಿಯು,
ಒದವುದಿಲ್ಲಿ ಶಾಂತಿಯು ॥ 3 ॥

ಗುಂಪೆ, ನಿನ್ನ ಶಿಖರವೇರೆ
ತಂಪು ನಯನ ಮನದೊಳೂರೆ
ಪೆಂಪ ತೋರ್ಪ ಕಡಲ ನೋಟ
ಕಂಪ ತರುವ ಗಾಳಿಯೋಟ
ರಸಿಕಗಿದೆ ರಸಾಯನ,
ಹೊಸ ನಿಸರ್ಗಭೋಜನ ॥ 4 ॥

ಕೊಡಲಿ ಕಡಿತದಿಂದ ಪಡೆದ
ಪೊಡವಿಯಿಂದು ಸಾಲದೆಂದು

ನುಡಿಯುತಿರುವೆಯೇನು, ಪಡುವ
ಕಡಲನೊಳ್ಪ ಬೆಡಗಿನಿಂದ?
ಆಶೆ ಭಾಷೆ ಫಲಿಸಲಿ,
ದೇಶ ಕೋಶ ಬೆಳಗಲಿ ॥ 5 ॥

ಮೂಡ ಪಡುವ ತೆಂಕ ಬಡಗ
ನಾಡ ನೋಡುತಿರುವ ಬೆಡಗ,
ಹಾಡಲೆಂದೆ ಮನದ ಬಯಕೆ
ಮಾಡಲೇನು ಮಾತು ಸಾಕೆ?
ಅಂತು ವಿಪುಲ ನೀನಹೆ;
ಇಂತು ವಿಫಲ ನಾನಿಹೆ ॥ 6 ॥

ಜಗವ ಮೆಟ್ಟಿ ಘನತೆಯಿಂದ
ಮುಗಿಲ ಮುಟ್ಟಿ ಸೊಗಸಿನಿಂದ
ದಿಗಿಲುಗೊಳಿಸಿ ಮಿಗಿಸಿ ನಿಂದ
ನಗವೆ, ನಿನ್ನ ಬಗೆಯ ಚಂದ
ಚೆಲುವ ರೂಪನಾಂತಿಹೆ;
ಒಲಿದು ಮುಂದೆ ನಿಂತಿಹೆ ॥ 7 ॥

ಎನ್ನ ತುಳುವ ನಾಡ ಜಸದ
ಉನ್ನತಿಯನು ತೋರುತೆಸೆದ
ನಿನ್ನ ಶುಭ್ರ ಶಿಖರಕಿಂದು
ಸನ್ನುತಿಯನು ಸಲಿಸಲೆಂದು
ಅವಸರದಲಿ ಹಾಡಿದೆ;
ಕವನ ಕಟ್ಟಿ ನೋಡಿದೆ ॥ 8 ॥

ತುಳುನಾಡಿತಿ

ಹೊಳೆವುದು ಹೊಳೆ ಬೆಳೆ ತೋಟ
ನಾಡ ನಡತೆಗಿದೆ ನೋಟ,
ಕಣ್ ಬಗೆಗಳ ನಲಿದಾಟ
ನಿಜ ನಿಸರ್ಗದಲಿ ಮಾಟ ॥ 1 ॥

ನಿತ್ಯ ಶಾಂತಿಮಯ ಶಿಬಿರ
ನೋಡ, ನಾಡು ತುಳುಜನರ;
ಸುಗ್ಗಿ ಸಂತಸವ ಚೆಲ್ಲಿ
ನೆಲವೆ ನಲಿಯುತಿಹುದಿಲ್ಲಿ ॥ 2 ॥

ಚೈತನ್ಯದ ಚೆಲು ಚವರಿ
ಸಿರಿ ತುಳುನಾಡಿನ ಕುವರಿ;
ಗೌರವ ಗುಣ ಗಂಭೀರೆ
ಸುರ ಸೌಂದರ್ಯವೆ ಸೂರೆ ॥ 3 ॥

ಅರಳಿರುವಲರೆವೆ ನಿನ್ನ
ಪುಷ್ಪಿತ ಸೌರಭವನ್ನ
ಸುತ್ತಲು ಸುರಿದಿದೆ ಚಿನ್ನ,
ಎತ್ತಲು ಗಮಗಮವನ್ನ ॥ 4 ॥

ದಂತ ಪಂಕ್ತಿ ಹಿರಿ ಹಿಗ್ಗೆ –
ದುಂಡುಮಲ್ಲಿಗೆಯ ಮೊಗ್ಗೆ
ಪೂರ್ಣಚಂದ್ರಗಿದೆ ಬುಗ್ಗೆ,
ಹರೆಯವೆತ್ತ ತುಳು ಹುಡಿಗೆ ॥ 5 ॥

ಸಿರಿ ತುಳುನಾಡಿನ ಬಾಲೆ,
ಕಣ್ಣಕಾಂತಿಯನೆ ಪೋಲೆ,
ಜಿಂಕೆಮರಿಯು ತಾನತ್ತು
ಬೇಡಿತೆ ನಿನ್ನೊಳು ಸೊತ್ತು? ॥ 6 ॥

ಚೆಲುವ ಚೆಂದುಟಿಯು ಚೆಲ್ಲೆ
ರಾಗರಂಜನವ ನಲ್ಲೆ,
ತೊಂಡೆಹಣ್ಣದೆನಲೊಲ್ಲೆ
ಪಲ್ಲವೋಲ್ಲಸಿತ ಬಲ್ಲೆ ॥ 7 ॥

ಸರಸಿಜಮುಖಿಯೆಂದೇಕೆ
ಬಣ್ಣಿಪೆಯೇ ಕವಿ? ಜೋಕೆ,
ಕನಸು ಮನಸಿಗದು ಬಯಕೆ
ಸುಂದರ ಸಂಗ್ರಹ ಸಾಕೆ? ॥ 8 ॥

ಕೆಸರಿನ ಬಸುರಿಂದೆದ್ದು
ಕಂಟಕ ಕಾಯದೊಳಿದ್ದು
ಹೂವದಿರುಳು ಹುದುಗಿರದೆ?
ನಿನಗೆ ನೀನೆ ಸರಿ ಮುಗುದೆ ॥ 9 ॥

ಸತ್ಯ ಸುಂದರಕೆ ಬೆರೆತ
ನಿತ್ಯ ನಿರ್ಮಲತೆಯರಿತ
ಪ್ರೇಮ ಪೂರ್ಣಿಮೆಗೆ ಬಲಿದ
ಮೈಯ ಕಟ್ಟು ಬಿಗಿ ಬಿನದ ॥ 10 ॥

ಶಾಂತಿ ನೀತಿ ನಯಲೋಕ –
ದಲ್ಲಿ ನೀನೆಯಧಿರಾಣಿ
ಕಾಂತಿಕಲೆಯ ಕಟ್ಟೆರಕ
ಸೊಲ್ಲಿಸುತಿಹೆ ರಸರಾಣಿ ॥ 11 ॥

ಕುದುರೆಮುಖದ ತುದಿಯೇರಿ
ಇಳಿದು ಬಯಲ ಬಳಿ ಹಾರಿ
ನೇತ್ರಾವತಿಯಲಿ ಮಿಂದು
ಮಂಗಳೂರಿನಲಿ ನಿಂದು – ॥ 12 ॥

ಸಾಗರಸಂಭವಶ್ರುತಿಗೆ
ರಾಗವ ಜೋಡಿಸು ಜತೆಗೆ;
ನೆಲ ನಲಿಯಲಿ ತನಿತಾನ !
ಗಾನ ನಿನಗೆ ವರದಾನ ॥ 13 ॥

ಮಕ್ಕಳ ಮುದ್ದಿಸುವಂದು
ಜೋ – ಜೋ – ಜೋಗುಳವೆಂದು,
ಕನ್ನಡ ಕವಿಗಳಿಗಂದು
ನೀ ಕಲಿಸಿಹುದಹುದೆಂದು – ॥ 14 ॥

ಕವಿವರ ಮುದ್ದಣ ಪೇಳ್ದ
ತಾಯ್ನುಡಿ ತಿರುಳರಿತಿದ್ದ
ಮುದ್ದು ಮುದ್ದು ಜಗವಾಳ್ದ
ಮುದ್ದಣ ಸವಿ ಸವಿದೆದ್ದ ! ॥ 15 ॥

ಪಚ್ಚೆ ಪೈರುಗಳ ನೋಡು
ಹೊಲ ನೆಲದಲಿ ನೀನಾಡು
ಕಟ್ಟಳೆಯನು ಕಾಪಾಡು
ತುಳುಪಾಡ್ದನ ಪದ ಹಾಡು ॥ 16 ॥

ನಟ್ಟಿ ನೇಜಿಯೊಳೆ ನಿರತೆ
ರಾಗಲಹರಿಗೇಂ ಕೊರತೆ?
ಮನೋಮಂದಿರದೊಳಂತೆ
ಪುಣ್ಯಪಾಡ್ದನದ ಚರಿತೆ ॥ 17 ॥

ದಾನಧರ್ಮದಲಿ ನಿರತ
ಕಟ್ಟು ಕಟ್ಟಳೆಯೊಳಿರುತ
ಕೀರ್ತಿವೆತ್ತ ತುಳುಜನರ,
ಹಾಡು, ಪಾಡ್ದನದೊಳದರ ॥ 18 ॥

ಶಿಲ್ಪ ಶಾಸ್ತ್ರಿಗಳ ರಚನೆ,
ಕಲಾ ಧರ್ಮಗಳ ಘಟನೆ,
ಸಾವಿರ ಕಂಬದ ಬಸದಿ –
ಶಾಸನ – ಶಾಶ್ವತ ಕೀರ್ತಿ ॥ 19 ॥

ಕಾಲನು ಕುಣಿತದಿ ಕೆದರೆ
ಹಾ! ಹಾಳಾಯಿತೆ ಬಿದಿರೆ?
ಬಾರ್ಕೂರಿನ ರಸಕಥೆಯ,
ಗತ ವೈಭವದುರುವ್ಯಥೆಯ ॥ 20 ॥

ಚೌಟ ಬಂಗರೊಡೆತನದಿ,
ಬಂಟರಾಳ್ದ ಮನೆತನದಿ,
ನಡೆದ ನಡಾವಳಿ ನೇಮ
ಹಾಡು ಪಾಡ್ದನದಿ ನಮ್ಮ ॥ 21 ॥

ಕೋಟೆಕೊತ್ತಳಗಳೊಡೆದು,
ಮಂದಿ ಮಾರ್ಬಲವ ಕಡೆದು,
ಅರಿ ಶಿರ ಚೆಂಡಾಡಿದನು,
ವೀರನಾರು ಹೇಳಿದನು? ॥ 22 ॥

ಹಾಡು ಪಾಡ್ದನವ ಹಾಡು
ಹ ಹಾ! ವೀರಕೃತಿ ಹಾಡು;
ವೀರವನಿತೆಯೆನೆ ಹಾಡು,
ಎದೆಯನರಳಿಸಲಿ ಹಾಡು. ॥ 23 ॥

ಸ್ವರ್ಣ ಭೂಮಿಯಲಿ ಹರಳು
ಧನ್ಯ ಜನ್ಮಕಿದೆ ಹುರುಳು,
ತೌಳವಾನ್ವಯದ ತಿರುಳು,
ನಿನ್ನ ಕಾಂತಿಮಯ ಕರುಳು. ॥ 24 ॥

ಸತ್ಯಸಂಗರದ ಭಟರು,
ಧೀರ ಶೂರ ತುಳುಜನರು
ನಿನ್ನ ಕರುಳೊಳಿಡಿದಿಹರು,
ವೀರಘೋಷ ಮೊಳಗುವರು ॥ 25 ॥

ತುಳುವ ಜವ್ವನಿಗನೊಲಿಯೆ,
ಹೆಮ್ಮೆ ಹುಮ್ಮಸದಿ ನಲಿಯೆ,
ಪ್ರೇಮಪುತ್ಥಳಿಯ ಪಡೆದು,
ಹಿಗ್ಗಿ ಹಿಗ್ಗಿ ಸುಖ ಸವಿದು ॥ 26 ॥

ವರ್ಷ ನಿಮಿಷದಂತಿರಲು,
ಅಯ್ಯೊ! ಜೋಡಿ ಬೇರ್ಪಡಲು;
ನೊಂದು ಬೆಂದೊಡಲ ಬೆತೆಯ
ಹಾಡ, ಪಾಡ್ದನವ ಕತೆಯ! ॥ 27 ॥

ಹಾಡು, ಪಾಡ್ದನವ ಹಾಡು,
ಮೈಯ ಮರೆತೆಯದೊ ನೋಡು;
ಕಣ್ಣನೀರನದನೊರಸು,
ಕರುಣ ಕಥೆಯನಿದೊ ನಿಲಿಸು ॥ 28 ॥

ನೀನೋರ್ವನೊಳೊಡನಾಡಿ,
ಸವಿಸವಿಯುವೆ ಸಿಂಗಾಡಿ;
ಜನ್ಮ ಜತನದಲಿ ಜೋಡಿ
ಮಾಡಿಕೊಂಡಿರೊಡಗೂಡಿ ॥ 29 ॥

ಮುಗ್ಧ ಮನೋಹರ ಮಿಲನ,
ಸತ್ಯ ಸುಖದ ಸಂಕಲನ,
ಚಿತ್ತ ಚೇತನದ ಚಲನ;
ವಿಶ್ವ ವೈಭವದ ವಲನ ॥ 30 ॥

ಕೊರಗ

ಸುಡುವ ಬಿಸಿಲಿನ ಬೇಗೆಯುರಿ ಬಡಿದು, ತೊಗಲೆಲ್ಲ
ಸುಟ್ಟು ಸೀಕರಿಹೋದರೂ ಬಣ್ಣಕೆಡದಂಥ
ಕರಿಮೆಯ್ಯ ಹಿರಿಜೀವ! ಭೋರೆಂಬ ಜಡಿಮಳೆಗೆ
ಅಡಿಯಿಂದ ಮುಡಿವರೆಗು ನೀರು ಧಾರಾಕಾರ
ಸುರಿಯುತ್ತಿದ್ದರು ಶೀತನಿರ್ಲಿಪ್ತ ಸಮಭಾವ!
ಮೈಮಾನ ಮುಚ್ಚಲಿಕೆ, ನಡನಡುಗಿಸುವ ಚಳಿಗೆ,
ಹರುಕುಚಿಂದಿಯ ಹೊದಿಕೆ – ಏನಿಲ್ಲವೀತನಿಗೆ !

ಪ್ರಕೃತಿಯ ಪ್ರಕೋಪಕ್ಕೆ ತಾಪಕ್ಕೆ ಶಾಪಕ್ಕೆ
ಎಲ್ಲದಕು ಮೂಕಬಲಿಯಾಗಿಯೇ ಬಾಳ್ದವನು!
ಕಾಟಿಕಾಡಾನೆಗಳ ತೊತ್ತಳದ ತುಳಿತಕ್ಕೆ
ಹಗಲಿರುಳು ತಲೆಯೊಡ್ಡಿ ಬೆಟ್ಟದಡಿಯಲಿ ಚಾಚಿ
ಬಿದ್ದಿರುವ ಹೆಬ್ಬಂಡೆಯಂತಿಹನು! ಬುರುಡೆಗವಿ
ಒಳಮುದುಡಿ ಮಿದುಳೋ ಮಹಾಮೌನಿ! ಇರಲೊಂದು
ಮನೆಯಿಲ್ಲ, ಮಠವಿಲ್ಲ, ಗುರಿ ತೋರ್ಪ ಗುರುವಿಲ್ಲ.
ಸುಖದುಃಖದರಿವಿಲ್ಲ, ನಲ್ಮೆಬಲ್ಮೆಗಳಿಲ್ಲ;
ಇಲ್ಲವೆಂಬುದೆ ಇವನ ಬದುಕು ಭಾಗ್ಯಗಳೆಲ್ಲ!
ಏನಾದರೂ ತನಗೆ, ನೋವಾದರೂ ತನುಗೆ
ಎಂತಾದರೂ ಮನಕೆ – ಯಾವುದಕು ಇವ ಕೊರಗ!

ನಾಡನಾಳುವ ಮಂದಿ – ಉತ್ತಮೋತ್ತಮ ಜನರು
ವೇದಶುದ್ಧ ಸಮಾಜ, ಮುಖಕೆ ಉಗುಳುವ ತೆರದಿ
ಇವನ ಪೀಳಿಗೆಗೆಸೆದ ಹೆಸರು ಕಾಡಿನ ಕೊರಗ!

ಮಾನಪಮಾನವೋ ಲಾಭವೋ, ನಷ್ಟವೋ
ಸೋಲೊ ಗೆಲುವೋ ಸುಖವೊ ದುಃಖವೋ ಬಂದಿರಲಿ,
ಮೇಣಾವುದೂ ಬರದಿರಲಿ, ಎಂತಾದರೂ ಕೊರಗ!

ಚಂಡಾಲ ಭಿಕ್ಷುಕಿಗೆ ಶಿಷ್ಯಪಟ್ಟವನಿತ್ತು
ಮಗಳಂತೆ ಮಮತೆಯಲಿ ಸಾಕಿದಾ ಶ್ರೀ ಬುದ್ಧ
ಇವಗಾಗಿ ಕೊರಗಿದ್ದ, ಕ್ರಿಸ್ತ, ಮಹಮ್ಮದ ಮತ್ತೆ
ಜಿನದೇವ ಜರತುಷ್ಟ್ರ, ಪ್ಲೇಟೊ ಟಾಲಿಸ್ಟಾಯ್
ಸಾಕ್ರಟೀಸ್ ಮುಂತಾದ ಶಕಪುರುಷರೆಲ್ಲರೂ
ಅಂದಿನಿಂ ಬೋಧಿಸಿದರಿಂದಿಗೂ ಇವ ಕೊರಗ!

ದೇವಸುತನೀತ ಮನುಕುಲದ ಮೂಲದ ಮನುಜ
ಇವನೆ ಹರಿಜನ, ನರಜನರಿಗೆಲ್ಲ ಮೊದಲಿಗನು –
ಎಂದು, ಈ ಹಿಂದುಳಿದ ಬಂಧುವನ್ನುದ್ಧರಿಸೆ
ಬಂದ ಗಾಂಧಿಯು ಸಂದ ಗುಂಡಿಗಾಹುತಿಯಾಗಿ!
ಆಹುತಿಗೆ ಸಂದರೂ ಇವ ನಿರಂತರ ಕೊರಗ!

ಆತ್ಮ ಪರಮಾತ್ಮ ತತ್ವವ ತಿಳಿಸೆ ಗೀತೆಯಲಿ
ಶ್ರೀಕೃಷ್ಣ ಭಗವಂತ ಹೇಳಿದಾ ಹಿರಿ ಮಾತು
ಇವನ ಕಂಡಾಗೆಲ್ಲ ಎನಗೆ ನೆನಪಾಗುವುದು
'ನೈನಂ ಛಿಂದಂತಿ ಶಸ್ತ್ರಾಣಿ
ನೈನಂ ದಹತಿ ಪಾವಕಃ
ನಚೈನಂ ಕ್ಲೇದಯಂತ್ಯಾಪಃ
ನ ಶೋಷಯತಿ ಮಾರುತಃ

ನೂರು ನೂರು ಕಣ್ಣೀರು

ನೂರುನೂರು ಕಣ್ಣೀರು ಹರಿಸಿದೆನು
ಮತ್ತೆ ಮೈಯ ಮರೆತೆ;
ನೋವೆ? ನಲಿವೆ? ನೆನೆದಶ್ರು ಸುರಿಸಿದೆನು,
ಬೊಗಸೆ ತುಂಬಿದೊರತೆ!

ಕಿರಿಯನೊಂದು ಕಾಣಿಕೆಯು ಹಿರಿಯನಿಗೆ
ಬಾಷ್ಪಪುಷ್ಪವಿಡುವೆ;
ಎನ್ನ ತಾಯ ಹಿರಿಗುವರ ಮುದ್ದಣಗೆ
ಎರಗಿ ಕರವ ಮುಗಿವೆ.

2

ತುಳುವಬ್ಬೆಯು ಜೋಜೋ ಎನೆ ಹಾಡಿರೆ
ಸಾಗರಸಂಭವ ಶ್ರುತಿಗೆ,
ಕುದುರೆಮುಖವು ಶಿರವೆತ್ತುತ ನೋಡಿರೆ
ನದಿಕನ್ನಿಕೆ ಪದಹತಿಗೆ

ತೆಂಗಿನ ಕಂಗಿನ ತಲೆ ತೂಗಾಡಿತು
ಓಬೇಲೆಯ ಪಾಡ್ದನಕ್ಕೆ;
ದುಡಿತದ ಬೇನೆಗೆ ದುಡಿ ಮದ್ದಾಯಿತು
ಬಡಿಯುವ ಚೋಮನ ಮನಕೆ

ಆಟಿ ಕಳೆಂಜನ ಸೋಣದ ಜೋಗಿಯ
ಅಂಗಣ ರಿಂಗಣ ನಲಿಕೆ.
ಮೇಳದಿ ತಾಳದಿ ಭೂತದ ಕೋಲದಿ
ಕುಣಿಯಿತು ನೆಲ ನಂದಳಿಕೆ

ಬೀಸುಗಾಳಿಯಲಿ ಸೂಸುಮಳೆಯಲಿ
ಸಿಡಿಲು ಮಿಂಚಿನಬ್ಬರವು;

ಓಟ ಕಂಬಳದಿ ಬೇಟೆ ಹಂಬಲದಿ
ಆಟ ದೊಂದಿಯಾರ್ಭಟವು

ಅಲ್ಲಿ–ದೇಗುಲದಿ ಗಂಟೆ ಮೊಳಗಿತು
ಅವನೊ ಮಾಲೆಗಾರ;
ನಿಲ್ಲು–ದೇವರಾರತಿಯು ಬೆಳಗಿತು
ಬಾಗಿ ಬಕುತಿ ತೋರ

ಹಗಲು ರಾತ್ರಿಯಿದೆ ಜಾತ್ರೆಯಾಗಿದೆ
ತುಳುವ ನಾಡಿನಲ್ಲಿ;
ರಸದ ರಥದ ಯಾತ್ರೆಯಲಿ ಸಾಗಿದೆ
ಜನತೆ ಜತೆಯೊಳಿಲ್ಲಿ.

ನವನವೋನ್ಮೇಷ ತುಂಬಿದಾವೇಶ
ನಿಜ ನಿಸರ್ಗದಾಟ;
ವೀರ ಶೃಂಗಾರ ಹಾಸ್ಯ ಕಾರುಣ್ಯ
ರಸದ ರುಚಿಯ ಊಟ.

ಬಾಳ ಬವಣೆಯನು ಮರೆತೆ ಹಾಡಿದನು
ಮುದ್ದು ಮುದ್ದು ಮನಕೆ;
ಉಪ್ಪುನೀರನೇ ಹೀರಿ ಬೆಳೆದ ಸಸಿ
ಕಲ್ಪವೃಕ್ಷ ಜನಕೆ

3

ಬಡವು ಬೆಂಕಿಯಲಿ ಒಡಲು ಬೆಂದಾಗ
ನೋವೆ ಕಾವ್ಯವೆಂದೆ;
ಮಡದಿ ಮೆಚ್ಚುಗೆಯ ಕೊಡಲು ಬಂದಾಗ
ಜೀವ ದಿವ್ಯವೆಂದೆ

ದೇಹ ಶ್ರೀಗಂಧ ಕೊರಡು ಸವೆಯಿತೋ
ಕ್ಷೀಣ ಕ್ಷೀಣವಾಗಿ;
ಭಾವ ಪರಿಮಳದ ಕಾವ್ಯವರಳಿತೋ
ನೂರು ದಳವೆ ಆಗಿ

ಸುತ್ತು ಮುತ್ತು ಕಂಪೆಲ್ಲ ಹರಡಲು
ಜೀವ ಬತ್ತಿ ಉರಿದು;
ಕಬ್ಬು ಹಿಂಡಿ ರಸವೆಲ್ಲ ಹೊರಡಲು
ಜಗಕೆ ಸವಿಯ ಸುರಿದು.

ಮನೆಯ ದುಃಖವನು ಮನದ ಮರುಕವನು
ಮರೆಯೆ ಕವಿಯೆ ಕವನಿಸಿದೆ;
ಬಾಳುವೆಯ ಕಹಿಗೆ ಭಾವನೆಯ ಸಿಹಿಯ
ಸವರಿ ಸುಖವ ಸಮನಿಸಿದೆ.

ಎಳತು ಮಾಮರದ ಹೊಸತು ಶಾಖೆಯಲಿ
ಪಂಚಮಸ್ವರದ ಗಾನ;
ಅಯ್ಯೋ! ರಣಹದ್ದು ಹೊಂಚುಹಾಕುತಲಿ
ಒಯ್ಯೆ – ಹಾರಿತೋ ಪ್ರಾಣ.

ಕೊರಳ ಮೇಲೆತ್ತಿ ಶುಭನವೋದಯವ
ಸಾರಿತೊಂದು ಮುಂಗೋಳಿ;
ಕಣ್ಣು ತೆರೆದು ಜನ ಕಂಡಿತ್ಯೆ ಜಗವ
ಜುಟ್ಟು ಕೊಯ್ದಳೋ ಕಾಳಿ !

4

ರಸಿಕರಾಜ್ಯದ ಮನ್ನಣೆಯ ಮಣೆಯ ರಸಋುಷಿಯೆ,
ಸಪ್ತಾಕ್ಷರೀಮಂತ್ರ ಜಪಿಸಿ ಬಾಳ್ದೆ;
ಎದೆಯ ಬೆಂಕಿಯ ಕಿಲುಬನು ತೊಳೆದ ಚಿನ್ನವೇ,!
ಕನ್ನಡಕೆ ಹೊಸಬೆಳಕ ನೀನೆ ಬೀರ್ದೆ.!

ಪದ್ಮಾವತೀ ಚರಣ ಚಾರಣಚಕ್ರವರ್ತಿಯೆನೆ
ಹಿಗ್ಗಿ ಹಾಡಿದನೊಬ್ಬ ಜಯದೇವನು;
ಮುದ್ದಿಸಿ ಮನೋರಮೆಯ ನೀನು ಮುದ್ದಣನಾದೆ
ಪ್ರೇಮವೇ ಕಾವ್ಯಕ್ಕೆ ಜೀವವೇನು?

ನಿನ್ನ ಮನವನು ಕದ್ದ ನೀನು ಕೈ ಹಿಡಿದಿದ್ದ
ಆ ಮನೋರಮೆಯ ಮಾತೆನಿತು ಮಾಟ,

ಕವಿಯ ಕಲ್ಪನೆಯೊಂದು ಸಾಮ್ರಾಜ್ಯ ಸೃಷ್ಟಿಯಲಿ
ನಿನ್ನ ರಮಣಿಯೆ ರಾಣಿ – ನೀನೆ ಸಾಮ್ರಾಟ!

ಜನರ ಸೊತ್ತನು ಸುಲಿದು ದ್ರವ್ಯರಾಶಿಯ ಪಡೆದು
ದುಡಿಸಿ ಸಾಯಿಸಿ ಕಟ್ಟಿಸಿದ ತಾಜಮಹಲು–
ಪ್ರೇಯಸಿಯ ನೆನಹಿಂಗೆ–ಶಾಜಹಾನ್‌ದೊರೆ, ದೊರೆಯೆ
ಈ ಮನೋರಮೆಯ ಮೂರ್ತಿಗೆ? ಬೆಲೆಯ ಹೇಳು?

ಮರಮರವ ಕಂಡು ಕೂಗಿದ ಕಿರಾತನೆ ಹಿಂದೆ
ರಾಮಾಯಣವ ಹಾಡಿ ಕವಿಯಾದನು;
ದಿನದಿನವು ದೇವರಿಗೆ ಮಾಲೆಯರ್ಪಿಸಿ ಬಂದೆ
ರಾಮಕಥೆ ಬರೆದೆ–ಮುಕ್ತನೆ ಎಂಬೆನು.

ನವೋದಯದ ಋಷಿ

ಬಂಜೆಯಲ್ಲ – ತುಳುತಾಯಿ ಪಡೆದಳು
ಪಂಜೆಯಂಥ ಪುತ್ರರನು;
ಕಂಡರಲ್ಲ, ಪಾಲ್ಗಡಲಿನೊಡಲೊಳು
ಹರಿಯ ಹೃದಯರತ್ನವನು.

ಬಂಟನಾವನೋ ಬಾಳುತ್ತಿದ್ದನು
ಬದುಕ ಬೆಳಗಿಸಿದನೇನು?
ಬಂಟವಾಳವೆನೆ ಹೆಸರು ಮೆರೆದಿದೆ
ಅಲ್ಲೆ–ಪಂಜೆ ಜನಿಸಿದನು.

ತಾಯಿ ಸೀತಮ್ಮ, ತಂದೆ ರಾಮಪ್ಪ,
ಇಳಿದುಬಂದರೋ ಇಳೆಗೆ;
ಮಗುವೆ ಕಣ್ಗೊಂಬೆ, ನಗುವೆ ಮೈತುಂಬೆ
ಬಣ್ಣ ಮೈನಿಂಬೆ ಬೆಳಗೆ !

ಶರಧಿ ಸಹ್ಯಾದ್ರಿ ಮಧ್ಯೆ ಶಾಲಿನಿಧಿ;
ಆಳ ಉನ್ನತಿ ವಿಶಾಲ;
ಇಂಥ ತೊಟ್ಟಿಲಲಿ ತಾಯಿ ಜೋಗುಳಿಸೆ
ಕನಸು ಕಂಡ ಕವಿ ಬಾಲ,

ಗದ್ದೆ ಕಳಮೆಗಳ ಬಳಸಿ ಕೇಳಿದನು
ನೇಜಿ ಹಾಡು–ಓ ಬೇಲೇ!
ನಿದ್ದೆಬಿಟ್ಟು ಬಯಲಾಟ ನೋಡಿದನು
ಧಿಮಿತ ಧೀಂಕಿಟದ ಲೀಲೆ

ಹರಿಯುತಿಹುದು ನದಿ ನಾದ ಕಲಕಲದಿ
ಜಲಧಿ ಘೋಷಕದೆ ಶ್ರುತಿಯು;
ಇದನು ಆಲಿಸುತ ಹೃದಯ ತೇಲಿಸುತ
ಮಯ್ಯ ಮರೆವ ಸಂಗತಿಯು.

ಪರವಪಂಬದರ ನಲಿವ ನಲಿಕೆಯರ
ದುಡಿಯ ಪಾಡ್ದನಗಳಲ್ಲಿ
ಭೂತ ಕೋಲ ನೇಮವು ನಡಾವಳಿ
ನಡೆಯುತಿರುವ ನೆಲದಲ್ಲಿ

ತುಳುವ ಸಂಸ್ಕೃತಿಯ ಸಾರ ಹೀರುತ
ರಾಯ ಮಂಗೇಶ ಬಳೆದ;
ಕಲಿತ ಕನ್ನಡದಿ ಕವಿತೆ ಕಟ್ಟುತ
ಹೆಸರು ಕವಿಶಿಷ್ಯ ತಳೆದ.

***

ಪಡುವಣದ ಗಾಳಿ ಬೀಸುತ ಬಂತು ತಾಯ್ನೆಲಕೆ,
ವಿಷವುಂಡು ಕೊನೆಗೆ ಸೊದೆಗೆಳಸಿದಂತೆ;

ಅಡಿಮೆಸಂಕಲೆ ಬಿಗಿಯೆ ಜನತೆಗಾಯ್ತೆಚ್ಚರಿಕೆ,
ಬಿಡುಗಡೆಯ ನೇಸರುದಯವ ಕಾಂಬ ಚಿಂತೆ.

ಎಚ್ಚರೆಚ್ಚರವಾಯ್ತು ಕೇಳಿತ್ತುಷಾಸೂಕ್ತಿ
ಕುಲಕೋಟಿ ಕಲಕಂಠ ಕೂಡಿಹಾಡಿ,
ನಮ್ಮ ತಾಯ್ನಾಡೆಂಬ ನಮ್ಮ ತಾಯ್ನುಡಿಯೆಂಬ
ಅಭಿಮಾನವನು ಮೆರೆದ ಮೋಡಿನೋಡಿ;

ಆ ನವೋದಯದ ಕನ್ನಡಕುಲಕೆ ಮಂತ್ರಿಸಿದ
ಋಷಿಚೇತನವು ಪಂಜೆ ಮಂಗೇಶರಾಯ;
ಏನು ದಿವ್ಯ ಸ್ಫೂರ್ತಿ! ನಿನಗೆ ಸಂದಿದೆ ಕೀರ್ತಿ
ನೀ ನಡೆದ ಹಾದಿಯನು ಹಿಡಿದೆವಯ್ಯ.

ಸೀಮೆ ಕೊಂಕಣದ ತೆಂಕಣಗಾಳಿಯಾಟವನು
ಹಾಡಿ ಕವನದ ಚಿತ್ರ ಮೋಡಿ ಮೆರೆದೆ;
ಎರೆದೆ ತುಳು ಪಾಡ್ದನದ ರಸದ ಸವಿಯೂಟವನು
ಅಮರಕಥೆ ಕೋಟಿಚೆನ್ನಯವ ನಮಗೊರೆದೆ.

ಭಾರತಕೆ ದಣ್ಣಾಯಕರನಿತ್ತ ವೀರಸೂ
ಅಮ್ಮೆ ಕಾವೇರಿ ಹರಸಿದ ನಾಡನು;
ಕನ್ನಡದ ಕಾಶ್ಮೀರ ಕೊಡಗು ಭೂರಮೆ ಸೊಬಗು
ಹಿಗ್ಗಿ ಹಾಡಿದೆ ಹುತ್ತರಿಯ ಹಾಡನು;

ನೀ ಕವನ ಗಾರುಡಿಗ, ಬಾಗಿಲಿನ ಬಿಲದೊಳಿಹ
ಹಾವ ತಲೆದೂಗಿಸಿದೆ ಹೂವಿನಂತೆ;
ರವಿ ಮೂಡುವನು, ಚಂದ್ರ ತೇಲುವನು, ನಕ್ಷತ್ರ
ಮಿನುಗುವುವು – ಕವಿ ಮಂತ್ರವಾದಿಯಂತೆ!

ನಿನ್ನ ವಿಕ್ರಮ ಹಲವು, ನಿನಗೆ ಪ್ರಥಮದ ಗೆಲುವು,
ಸಣ್ಣಕತೆಗಳ ಜನಕ, ಶಿಶುಗೀತೆ ತಾತ;
ನೀ ಹರಟೆಮಲ್ಲ ಮಾತಿಗೆ ಮಧುವ ಲೇಪಿಸಿದೆ
ಹಾಸ್ಯಪ್ರಬಂಧದಿ, ನವೋದಯದ ವಿಧಾತ.

ಬಂಧು ನೀ ಬೆನಗಲಗೆ, ಸನ್ಮಿತ್ರ ಮುದ್ದಣಗೆ,
ಸಂಗಾತಿ ಕಾಮತಗೆ, ರಾಷ್ಟ್ರಕವಿಗೆ ಗುರು;
ಕಾವೇರಿಯಿಂದ ಗೋದಾವರಿಯ ವರಮಿರ್ಪ
ಕನ್ನಡದ ಕುಲಕೋಟಿ ಎಲ್ಲ ನಿನ್ನವರು!

***

ಒಬ್ಬನೇ ಪಂಜೆ, ಒಬ್ಬ ಮುದ್ದಣ
ಒಬ್ಬ ರತ್ನಾಕರಣ್ಣ;
ಒಬ್ಬ ಪೈ ಮತ್ತೆ, ಇಬ್ಬರಿಲ್ಲವಂತೆ
ಹೋಲ್ವರಾರು ಇವರನ್ನ?

***

ಬಂಜೆಯಲ್ಲ– ತುಳುತಾಯಿ ಪಡೆದಳು,
ಪಂಜೆಯಂಥ ಪುತ್ರರನು;
ಕಂಡರಲ್ಲ–ಪಾಲ್ಗಡಲಿನೊಡಲೊಳು,
ಹರಿಯ ಹೃದಯರತ್ನವನು

ರಾಷ್ಟ್ರಕವಿ

ಉನ್ನತೋನ್ನತ ಪಶ್ಚಿಮಾದ್ರಿಯು
ಬೆನ್ನ ಹಿಂದಕೆ ನಿಂತಿದೆ,
ಅಳೆಯಲಾರದ ಆಳದಗಲದ
ನೀಲಜಲಧಿಯು ಮುಂತಿದೆ.

ಅತ್ತ ಗಜಶಾರ್ದೂಲ ಗರ್ಜನೆ
ಇತ್ತ ಪೆರ್ದೆರೆ ಮೊರೆತವು
ಇಂಥ ಮೇಳವು ರಾಗತಾಳವು
ನಿನ್ನ ಸ್ಫೂರ್ತಿಗೆ ದೊರೆತವು.

ಗಂಧವತಿ ಈ ಪೃಥ್ವಿ, ಕಳಮೆಯ
ಕಂಪು ಹೊಲ ಸಿರಿಮಂಚವು,
ತೆಂಗುಕಂಗಿನ ತೋಟ ತಲೆಯನು
ತೂಗುತಿರೆ ರೋಮಾಂಚವು.

ಭೂತ ನರ್ತನ, ದುಡಿಯ ವಾದನ,
ಯಕ್ಷಗಾನವು ಪಾಡ್ದನ;
ನದಿ ನಿನಾದವು ಪಕ್ಷಿಕೂಜನ
ನಿನ್ನ ಪ್ರತಿಭೆಗೆ ಸಾಧನ.

ಕರುಣೆಯಿಂ ಕವಿತಾವತಾರವು
ನಿನಗೆ ವಾಲ್ಮೀಕಿಯ ತೆರ,
ದೇವಪುತ್ರನ ಶಿಲುಬೆಗಿಕ್ಕಿದ
ನೋವು, ಗೋಲ್ಗೊಥದಾಕರ;

ವೇಶ್ಯೆ ವಾಸವದತ್ತೆ ಮಸಣದಿ
ಬುದ್ಧ ಭಿಕ್ಷುವನೀಕ್ಷಿಸೆ,
ಕವಷ ಶೂದ್ರರ್ಷಿಯ ಮಹಾ
ದಾಹಕ್ಕೆ ಸೂಕ್ತವು ಸಾಕ್ಷಿಸೆ

ಉತ್ತಮರ ನೀಚತ್ವ ಪ್ರಕಟಿತ
ಹೆಬ್ಬೆರಳ ಬಲಿದಾನದಿ;
ತಂಗಿಯಾದಳು ಸುಗತಗಾ
ಮಾತಂಗಿ ನಿರ್ಮಲ ಹೃದಯದಿ;

ವೇದ ಬೈಬಲ್ ಧಮ್ಮಪದ
ಜೈನಾಗಮವನೀ ಜೀರ್ಣಿಸಿ;
ಎತ್ತಿತೋರಿದೆ ರತ್ನದಂತಹ
ಕಾವ್ಯಕಥೆಗಳ ಪೂರ್ಣಿಸಿ.

ಎದೆಯ ಸ್ನೇಹವನೆರೆದು ಉರಿಸಿದೆ
ಕಾವ್ಯನಂದಾದೀಪವ,
ಜೀವ ಕೃಷ್ಣಾರ್ಪಿತವೆಂಬೆನು
ಆ ಅಭಿನ್ನದ ಭಾವವ.

ಆತ್ಮನಲಿ ಪರಮಾತ್ಮದರ್ಶನ
ಕಾಂಬ ಮಹಿಮಾದೃಷ್ಟಿಯು
ಅದೆ ನಿರಂತರ ನಿನ್ನ ಚಿಂತನ
ಅದಕೆ ಕಾವ್ಯದ ಸೃಷ್ಟಿಯು.

ಸತ್ಯದನ್ವೇಷಣೆಗೆ ತೊಡಗಿ
ಚರಿತೆ ಶೋಧನೆ ಮಾಡಿದೆ.
ಕವಿಯ ಕಾಲದ ಕಾವ್ಯದಾಳವ
ಮಥಿಸಿ ಬೋಧನೆ ನೀಡಿದೆ.

ನೀನು ಪಾಂಡಿತ್ಯದ ಹಿಮಾಚಲ
ಶಿಖರ – ಗೌರೀಶಂಕರ;
ನಿನ್ನ ಬಣ್ಣಿಸಲೆನ್ನಳವೆ? ನಾ
ಕಿರಿಯವನು ಕವಿಕಿಂಕರ.

ಕವಿತೆ ಸಂಶೋಧನೆಗಳುಭಯವು
ಸವ್ಯಸಾಚಿಸಿ ಸಾಗಿತು,
ಆಂಗ್ಲ ಕೊಂಕಣಿ ಕನ್ನಡಗಳ
ತ್ರಿವೇಣಿಸಂಗಮವಾಯಿತು.

ಪದ್ಯದಲ್ಲಿಯು ಗದ್ಯದಲ್ಲಿಯು
ನಿನ್ನ ಶೈಲಿಯು ನಿನ್ನದೆ;
ಒಬ್ಬ ಪೈ ಮತ್ತೊಬ್ಬರಿಲ್ಲವು
ಎಂಬ ಹೆಮ್ಮೆಯು ನಮ್ಮದೆ.

ತೌಳವರ ಇತಿಹಾಸ, ಇರುಳಲಿ
ಮುಚ್ಚಿ ಮರೆತಿರೆ, ಬೀರಿದೆ;
ಬೆಳಕನಲ್ಲಿಗೆ, ತುಳುವ ನಾಡನು
ಮೆಚ್ಚಿ ಮಮತೆಯ ತೋರಿದೆ;

ಮತ್ತೆ ಮರುಹುಟ್ಟಿದ್ದರೆನ್ನನು
ಮರುಳಿಸೌ ನಿನ್ನಂಕಕೆ –
ಎಂದು ತೌಳವ ಮಾತೆಯನು ನೀ
ಬಿನ್ನವಿಸಿದ್ಯೆ ಬಿಂಕದೆ.

ಹೆತ್ತ ಕೊಂಕಣಿ ತಾಯಿ ನಿನ್ನನು
ಇತ್ತಳೈ ತುಳುವಬ್ಬೆಗೆ,
ಹೊತ್ತು ಮೆರೆಸಿದಳಲ್ತೆ ಕನ್ನಡ
ಮಾತೆ ಬೆಳಕಿಗೆ ಹಬ್ಬುಗೆ!

ಭಾರತಾಂಬೆಯ ಭಕ್ತಿಯೆನಿತೋ
ಆತ್ಮಶಕ್ತಿಯನಿತ್ತಿತು;
ಎಲ್ಲ ತಾಯಂದಿರೆಲ್ಲ ಹರಕೆಯು
ನಿನ್ನ ಸಿರಿಮುಡಿಗೆತ್ತಿತು.

ದಾಸ್ಯದೈತ್ಯನ ಮುರಿಯೆ ಬಿಡುಗಡೆ
ದೇವರಿಗೆ ಕರೆ ನೀಡಿದೆ;
ಭರತಮಾತೆಯ ಕಂಬನಿಯ ಕಿಡಿ
ನಿನ್ನ ನುಡಿಯೊಳು ನೋಡಿದೆ.

ತೃಷೆಗೆ ಎರೆದಾ ನೀರು ಹಾ!
ಉಪ್ಪಾದುದೆನ್ನುತ ಮರುಗಿದೆ;
ರಾಹು ತೊಲಗಿಸಿ ಕೇತು ತಂದೆಯ
ತಂದೆ? ಎನ್ನುತ ಕೊರಗಿದೆ.

ಜೇನು ಸುರಿಯುವ ಹಾಲು ಹರಿಯುವ
ನಾಡು–ಕನ್ನಡ, ಹಾಡಿದೆ;
ತಾಯೆ ಬಾ ಮೊಗತೋರು, ಮಕ್ಕಳ
ಹರಸು, ಎನ್ನುತ ಬೇಡಿದೆ.

ಬೆಣ್ಣೆ ಬರುತಿರೆ ಮಂತು ಮುರಿಯಿತೆ?
ನಿನ್ನ ನೆಲ ಹೊರಗುಳಿಯಿತೆ?
ಹಂತ! ಗೂಬೆಯ ಗುಂಪು ಗಿಳಿಗಳ
ಹಿಂಡ ಚೆದರಿಸಿ ಹೋಯಿತೆ?

ಪುಣ್ಯಸ್ಮರಣೆಗೆ ಕವನ ಪುಷ್ಪವ
ಅರ್ಪಿಸುವರ್ರೈ ಕವಿಗಳು;
ಆನು ಕಣ್ಣೀರ್ತುಂಬಿ ತಂದಿಹೆ,
ಬಾಷ್ಪ ಬಂಧುವೆ, ಕೈಕೊಳು.

ಶೋಕವೇ ಶ್ಲೋಕತ್ವ ಪಡೆಯಿತು
ಎನ್ನ ಹೃದಯದ ರಂಗದಿ,
ಕಾವ್ಯಕೌಮುದಿ ಕ್ಷೀರಸಿಂಚನ
ನಿನ್ನ ಹರಕೆಯ ಸಂಗದಿ.

ಈ ನಾಡು

ಉತ್ತರದಲಿ ಸೀತಾನದಿ ಗಡಿಯು,
ದಕ್ಷಿಣದಲ್ಲಿ ಪಯಸ್ವಿನಿಯು,
ಪೂರ್ವದಿ ಪಶ್ಚಿಮಗಟ್ಟವೆ ಮೇರೆ,
ಪಡುವಲು ಸುತ್ತಿದೆ ಕಡಲತೆರೆ.

ಈ ನಾಡನು–ತುಳುನಾಡನು, ಹಿಂದಕೆ
ಆಳಿದರರಸರು ದೊರೆತನದಿ;
ಅಜಿಲರು, ಚೌಟರು, ಬಂಗರು, ಬಲ್ಲಾ–
ಳರು, ಸಾಮಂತರು ಮನೆತನದಿ.

ವಿಟ್ಲಲ, ಕುಂಬಳೆ, ಬಾರ್ಕೂರೆನ್ನುತ
ಸೀಮೆಗಳಿದ್ದುವು ಹಲವಿಲ್ಲಿ;
ಸೀಮೆಗಳಾಳಿದ ರಾಜರ ಸಂತತಿ
ಇಂದಿಗು ಕೆಲವಿದೆ ಹೆಸರಲಿ!

ಎಲ್ಲಾ ಸೀಮೆಯನೆಲ್ಲಾ ದೊರೆಗಳು
ಚಂದದೊಳಾಳಿದರೆಂದಲ್ಲ;
ಆದರು, ರಾಜ್ಯದಿ ದಾನಧರ್ಮಗಳು
ನೇಮನಡಾವಳಿ ಕುಂದಿಲ್ಲ;

ಕಲ್ಲನು ಕೆತ್ತುತ ಜೀವವ ತುಂಬಿ
ತೋರಿದರ್ರೈ ತುಳು ಶಿಲ್ಪಿಗಳು!
ಸಲ್ಲಲಿತದ ಸವಿ ಪಾಡ್ದನ ಹಾಡಿ
ಉಬ್ಬಿದರ್ರೈ ತುಳುಕಬ್ಬಿಗರು.

ಹಾ! ಕಾಲನ ಬೇತಾಲನ ಕುಣಿತಕೆ
ಅಂದಿನರಮನೆಗಳುರುಳಿದುವು;
ಕಲಸಕನ್ನಡಿಯು. ಕೋಟೆಕೊತ್ತಳವು,
ಮಂದಿಮಾರ್ಬಲವು ಹೊರಳಿದವು!

ಸಿರಿಪಟ್ಟವನೇರಿದ ನೆಲದಲ್ಲಿ,
ನರಿಗಳು ನಾಯಿಗಳೋಡುತಿವೆ;
ಸಿರಿವಂತರು ಬಾಳಿದ ಮನೆಯಲ್ಲಿ,
ಹಾವು ಹೆಗ್ಗಣವು ಕೂಡುತಿವೆ.

ಅಂದಿನ ಸಂಭ್ರಮ ವಿಪುಲವೈಭವಗ-
ಳಿಂದಿಗದೆಲ್ಲವು ಬರಿ ಕನಸು!
ಹಿಂದಿನ ವೀರರ ಕತೆಗಳ ನೆನೆದೇ
ಕಂಬನಿ ಸುರಿಸುತಲೆದೆತಣಿಸು!

ದೇಶವು ಭಾಷೆಯು ನಮ್ಮದಿದೆಂದು
ಹಿಗ್ಗುವ ಕಾಲದಿ ಜನರೆಲ್ಲ;
ಈ ನಾಡಿನ ಮಂದಿಯ ಹಣೆಯಲ್ಲಿ
ಆ ಭಾಗ್ಯವ ವಿಧಿ ಬರೆದಿಲ್ಲ.

ಗೆರೆ ತಪ್ಪದಿರೆ ಬರೆವೆ

ಅರ್ಧ ಶತಮಾನ ದಾಂಟುತ ಬಂತು ಜೀವನದಿ;
ಕಾಲು ಕೆಸರಲಿ, ಮಿಕ್ಕ ಕಾಲು ಮರಳಿನಲಿ;
ಅಡಿಮೆ ಹೊಲೆ ಕೊಳೆಯಾಯಿತಾಯುಸ್ಸಿನರೆ ಬದುಕು
ಬಿಡುಗಡೆಯ ಬೇಗೆಗೆ ನಿವೃತ್ತಿ ಹುಡುಕು.

ಅಂದಿಗೂ ಶ್ರಮವೆ ದೈವತವೆಂದು ನೆರೆನಂಬಿ
ನಿಂದವನು, ಮೇಣದರ ಬಲದೆ ಬದುಕಿದೆನು;
ಇಂದಿಗೂ ದುಡಿತವೊಂದೇ ಹಿಡಿತವೀ ಬಾಳ
ಹಂದರಕ್ಕಾಧಾರವೆಂದೆ ಬಿಡದಿಹೆನು.

ನೇಗಿಲಿನ ಸಮಕೆ ಲೇಖನಿ ಹಿಡಿದ ಕಯ್ಯಲ್ಲಿ
ಗೆರೆ ತಪ್ಪದಿರೆ ಬರೆವೆ ಭೂಪಟದಿ, ಪುಟದಿ;
ತಲೆಯ ತೂಗಿತು ತೆನೆಯ ಭಾರದಲಿ ನವಶಾಲಿ,
ಅರಳಿ ಬಂದಿತೊ ಕವಿತೆ, ಹೊಸತು ಸಂಪುಟದಿ.

ಮೆಚ್ಚುಗೆಯೂ ಚುಚ್ಚುಗೆಯೊ ಬಂದದ್ದು ಬರಲಿ;
ನೇಗಿಲಿನ ಜತೆಗೆ ಲೇಖನಿ ಕಯ್ಯೊಳಿರಲಿ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
2014–2017

ಅಧ್ಯಕ್ಷೆ
ಎಂ. ಜಾನಕಿ ಬ್ರಹ್ಮಾವರ

ರಿಜಿಸ್ಟ್ರಾರ್
ಚಂದ್ರಹಾಸ ರೈ ಬಿ.

ಸದಸ್ಯೆರ್
ಪ್ರೊ. ಡಿ.ವೇದಾವತಿ
ಡಿ.ಎಮ್. ಕುಲಾಲ್
ಸುಭಾಶ್ಚಂದ್ರ ಪಡಿವಾಳ್
ಕುಂಬ್ರ ದುರ್ಗಾಪ್ರಸಾದ್ ರೈ ಎ.
ಜಯಶೀಲ
ಮೋಹನ್ ಕೊಪ್ಪಲ
ವಸಂತ ಶೆಟ್ಟಿ ಬೆಳ್ಳಾರೆ
ಕೃಷ್ಣಪ್ಪ ಉಪ್ಪೂರು
ರಘು ಇಡ್ಕಿದು
ರೂಪಕಲಾ ಆಳ್ವ
ಕೆ.ಟಿ. ವಿಶ್ವನಾಥ
ನವೀನ್ ಡಿ. ಪಡೀಲ್
ದಿವಾ ಕೊಕ್ಕಡ

ಕಯ್ಯಾರೆರ್ ತುಳುಟು ದಾದ ಮಲ್ತ್‌ದೆರ್
ಪನ್ಪಿನೆನ್ ತೆರಿಪಾವೊಡು ಪನ್ಪಿ ಉದ್ದೇಶೊಡೇ
'ಕಯ್ಯಾರೆರ್ನ ಕಬಿತೆಲೆನ್' ಕರ್ನಾಟಕ ತುಳು
ಸಾಹಿತ್ಯ ಅಕಾಡೆಮಿ ಪ್ರಕಟ ಮಲ್ತೊಂದುಂಡು.
ಈ ಬೂಕುಡಿಪ್ಪಿ ಕಬಿತೆಲೆಡ್ ಪೂರಾ
ಕಯ್ಯಾರೆರ್ ತುಳುನಾಡ್, ತುಳು ಬಾಸೆ,
ತುಳು ನೆಲತ್ತ ಬಗೆಟಿಪ್ಪಿ ಮೋಕೆ, ಸ್ವಾತಂತ್ರ್ಯ,
ದೇಶಭಕ್ತಿದ ಕಲ್ಪನೆಲೆನ್ ಕಟ್ಟ್ ಕೊರ್ತೆರ್.
ಉಂದುವೇ ಅತ್ತಾಂದೆ ಕನ್ನಡ ಬಾಸೆಡ್ಲಾ
ತುಳು ನೆಲತ್ತ ಬಗೆಟ್, ತುಳು ಸಂಸ್ಕೃತಿದ
ಬಗೆಟ್ ಕೆಲವು ಕಬಿತೆಲೆನ್ ಬರೆತೆರ್. ಈತೇ
ಅತ್ತಾಂದೆ ಕನ್ನಡ ಬಾಸೆಡ್ ತುಳು ಬಾಸೆ –
ಸಂಸ್ಕೃತಿದ ಬಗೆಟ್, ತುಳುನಾಡ್ದ ವ್ಯಕ್ತಿಲೆನ
ಬಗೆಟ್ ಮಸ್ತ್ ಲೇಖನೊಲೆನ್ಲಾ
ಅಪಗಪಗಂಡ್ ಬೇತೆ ಬೇತೆ ಪತ್ರಿಕೆಲೆಡ್,
ಸ್ಮರಣ ಸಂಚಿಕೆಲೆಡ್, ವಿಶೇಷಾಂಕೊಲೆಡ್
ಬರೆತೆರ್. ಅಯಿನ್ಲಾ ಸಂಪಾದನೆ ಮಲ್ತ್ಂಡ
ಪ್ರತ್ಯೇಕವಾಯಿನ ಮಲ್ಲ ಒಂಜಿ ಬೂಕು ಅವು
ಆವು. ಅತ್ತಾಂದೆ ಸಂಶೋಧಕೆರೆಗ್
ಪ್ರಯೋಜನಗ್ಲಾ ಬರು. ಅಂಚಾದ್
ಕೈಯಾರೆರೆನ್ ತುಳುತ್ತ ಬಗೆಟ್ ನಮ ಪ್ರಶ್ನೆ
ಮಲ್ಪುಲಕ್ಕ ಇಜ್ಜಿ.

ರಘು ಇಡ್ಕಿದು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್, ಮಂಗಳೂರು

ರೂ. 90